ಸಂಪುಟ 01 | ಸಂಚಿಕೆ 117 | ಭಾನುವಾರ 15 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಗ್ರಾಹಕ ಹಕ್ಕುಗಳ ದಿನ

ಗ್ರಾಹಕ ಹಕ್ಕುಗಳು ಮತ್ತು ಅಗತ್ಯಗಳ ಬಗ್ಗೆ ಜಾಗತಿಕ ಜಾಗೃತಿ ಮೂಡಿಸಲು ಪ್ರತಿ ವರ್ಷ ಮಾರ್ಚ್ 15 ರಂದು ಆಚ-ರಿಸಲಾಗುತ್ತದೆ. ಎಲ್ಲಾ ಗ್ರಾಹಕರ ಹಕ್ಕುಗಳನ್ನು ಗೌರವಿಸಬೇಕು ಮತ್ತು ರಕ್ಷಿಸಬೇಕು ಎಂದು ಒತ್ತಾಯಿಸಲು ಮತ್ತು ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರತಿಭಟಿಸಲು ಈ ದಿನವು ಒಂದು

## ಸುಭಾಷಿತ

ನಮ್ಮನ್ನು ನಾವು ಸರಿಪಡಿಸಿಕೊಂಡರೆ, ಇಡೀ ಜಗತ್ತನ್ನು ಸರಿಪಡಿಸಿದಂತೆ. ನಮ್ಮಲ್ಲಿ ನಾವು ಪರಿವರ್ತನೆ ತಂದುಕೊಂಡರೆ, ಜಗತ್ತಿಗೇ ಬೆಳಕು ನೀಡಿದಂತೆ.

ರಮಣ ಮಹರ್ಷಿ

# ಜಿಬಿಎ ಐದು ಪಾಲಿಕೆಗಳನ್ನು 50 ವಿಭಾಗ, 150 ಉಪವಿಭಾಗಗಳಾಗಿ ವಿಂಗಡಣೆ

**ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿನ ಆಡಳಿತಾತ್ಮಕ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ 50 ವಿಭಾಗ ಹಾಗೂ 150 ಉಪವಿಭಾಗಗಳನ್ನು ರಚಿಸಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸುತ್ತೋಲೆ ಹೊರಡಿಸಿದ್ದಾರೆ.**

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ 2024 ಅನ್ವಯ ಮೇ 15, 2025ರಿಂದ ಜಿಬಿಎ ಅಸ್ತಿತ್ವಕ್ಕೆ ಬಂದಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರದ್ದುಗೊಂಡಿದೆ. ಇದರೊಂದಿಗೆ ಬೆಂಗಳೂರು ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣ ನಗರ ಪಾಲಿಕೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ 369 ವಾರ್ಡ್ ಗಳ ಪುನರ್ವಿಂಗಡಣೆ ಮಾಡಲಾಗಿದೆ.ಈ ವಾರ್ಡ್‌ಗಳ ಆಧಾರದ ಮೇಲೆ ಆಡಳಿತವನ್ನು ಇನ್ನಷ್ಟು ಸುಗಮಗೊಳಿಸಲು ಕಂದಾಯ, ಕಾಮಗಾರಿ ಹಾಗೂ




ಆರೋಗ್ಯ ಇಲಾಖೆಗಳ ಕಾರ್ಯನಿರ್ವಹಣೆಗೆ ಒಟ್ಟು 50 ವಿಭಾಗ ಮತ್ತು 150 ಉಪವಿಭಾಗಗಳನ್ನು ರಚಿಸಲಾಗಿದೆ ಎಂದು ಜಿಬಿಎ ಅಯುಕ್ತರು ತಿಳಿಸಿದರು.

ನಗರ ಪಾಲಿಕೆವಾರು ವಿಭಾಗಗಳ ವಿವರ ಹೀಗಿದೆ:ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ 63 ವಾರ್ಡ್‌ಗಳಿಗೆ 7 ವಿಭಾಗ ಮತ್ತು 24 ಉಪವಿಭಾಗಗಳನ್ನು ರಚಿಸಲಾಗಿದೆ. ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲಿ 50 ವಾರ್ಡ್‌ಗಳಿಗೆ 7 ವಿಭಾಗ ಹಾಗೂ 22 ಉಪವಿಭಾಗಗಳನ್ನು ಮಾಡಲಾಗಿದೆ. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ 112 ವಾರ್ಡ್‌ಗಳಿಗೆ 15 ವಿಭಾಗ ಹಾಗೂ 45 ಉಪವಿಭಾಗಗಳನ್ನು ರಚಿಸಲಾಗಿದೆ. ಉತ್ತರ ನಗರ ಪಾಲಿಕೆಯಲ್ಲಿ 72 ವಾರ್ಡ್‌ಗಳಿಗೆ 11 ವಿಭಾಗ ಮತ್ತು 30 ಉಪವಿಭಾಗಗಳನ್ನು ಮಾಡಲಾಗಿದೆ.

ದಕ್ಷಿಣ ನಗರ ಪಾಲಿಕೆಯಲ್ಲಿ 72 ವಾರ್ಡ್‌ಗಳಿಗೆ 10 ವಿಭಾಗ ಹಾಗೂ 29 ಉಪವಿಭಾಗಗಳನ್ನು ರಚಿಸಲಾಗಿದೆ.ಈ ವ್ಯವಸ್ಥೆಯಿಂದ ನಗರ ಪಾಲಿಕೆಗಳ ಆಡಳಿತಾತ್ಮಕ ಕಾರ್ಯಗಳು ವೇಗವಾಗಿ ನಡೆಯಲಿದ್ದು, ಸಾರ್ವಜನಿಕರಿಗೆ ಸೇವೆ ನೀಡುವ ಪ್ರಕ್ರಿಯೆ ಇನ್ನಷ್ಟು ಸುಗಮವಾಗಲಿದೆ ಎಂದು ಮಹೇಶ್ವರ್ ರಾವ್ ತಿಳಿಸಿದ್ದಾರೆ.

## ನೀರಿನ ಅರವಟಿಗೆ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ನಮ್ಮ ಇಲಾಖೆ ಕಚೇರಿಗೆ ಬರುವ ಗ್ರಾಹಕರು, ರೈತರಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿನ ದಾಹ ನೀಗಿಸಲು ಅರವಟಿಗೆ ವ್ಯವಸ್ಥೆ ಮಾಡಲಾಗಿದೆ. ಸುತ್ತಮುತ್ತಲಿನ ರೈತರು ವಿದ್ಯುತ್ ಬಿಲ್ ಪಾವತಿಗಾಗಿ ಬರುವ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಕುಷ್ಟಗಿ ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕೆಂಚಪ್ಪ ಹೇಳಿದರು.ಪಟ್ಟಣದ ಕುಷ್ಟಗಿ ರಸ್ತೆಯ ಜೆಸ್ಕಾಂ ಶಾಖಾ ಕಚೇರಿಯಲ್ಲಿ ಏರ್ಪಡಿಸಿದ್ದ ನೀರಿನ ಅರವಟಿಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.**



ನಂತರ ಸ್ಥಳೀಯ ಜೆಸ್ಕಾಂ ಶಾಖಾಧಿಕಾರಿ ರಶ್ಮಿ ಚವಾಣ್ ಮಾತನಾಡಿ, 'ಇಲಾಖೆಯ ಸಿಬ್ಬಂದಿ ಸಹಕಾರದಿಂದ ಗ್ರಾಹಕರಿಗಾಗಿ ಇಂತಹ ನೀರಿನ ಅರವಟಿಗೆ ವ್ಯವಸ್ಥೆ ಮಾಡಲಾಗಿದೆ. ಬೇಸಿಗೆ ದಿನಗಳು ಇರುವದರಿಂದ ಜನರು ಸದುಪಯೋಗ ಪಡೆಯಬೇಕು' ಎಂದು ಹೇಳಿದರು. ಜೆಸ್ಕಾಂ ಸಿಬ್ಬಂದಿ ರಾಚಯ್ಯ ಹಿರೇಮಠ, ಶರಣಪ್ಪ, ಬೀರಪ್ಪ, ಮಹಿಬೂಬ ಪೀರಾ, ರಹೀಮ್, ವೀರಣ್ಣ ನವೀನಸಿಂಗ್, ಸಂಗಯ್ಯ, ಶರಣಪ್ಪ ಅಂಗಡಿ ಇತರರು ಹಾಜರಿದ್ದರು.

# ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ದಂತ ವೈದ್ಯ ಡಾ.ನವೀನ್

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರಿನ ಪ್ರತೀ ಶನಿವಾರದಂತೆ ನಡೆಯುವ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ಈ ವಾರವೂ ವಿದ್ಯಾರ್ಥಿಗಳಿಗೆ ಜ್ಞಾನವರ್ಧಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.**

ಈ ಕಾರ್ಯಕ್ರಮಕ್ಕೆ ಸಿಂಧನೂ-ರಿನ ನವೀನ್ ಡೆಂಟಲ್ ಕ್ಲಿನಿಕ್ ಸಿಂಧನೂ-ರಿನ ದಂತ ವೈದ್ಯಾಧಿಕಾರಿಗಳಾದ ಡಾ. ನವೀನ್ ಸರ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಮಾಹಿತಿಯನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಡಾ. ನವೀನ್ ಸರ್ ಅವರು "ದಂತ ಆರೋಗ್ಯ" ಎಂಬ ಮಹತ್ವದ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ದಂತ ಆರೋಗ್ಯವು ಮಾನವನ ಸಮಗ್ರ ಆರೋಗ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ತಿಳಿಸಿದರು. ದಿನನಿತ್ಯ



ಹಲ್ಲುಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು, ದಿನಕ್ಕೆ ಎರಡು ಬಾರಿ ಸರಿಯಾದ ರೀತಿಯಲ್ಲಿ ಬ್ರಷ್ ಮಾಡುವುದು, ಮೌತ್ ಹೈಜಿನ್ ಕಾಪಾಡಿಕೊಳ್ಳುವುದು ಹಾಗೂ ನಿಯಮಿತವಾಗಿ ದಂತ ವೈದ್ಯರನ್ನು ಭೇಟಿ ಮಾಡುವ ಅಗತ್ಯದ ಬಗ್ಗೆ ಅವರು ವಿವರವಾಗಿ ತಿಳಿಸಿದರು.

ಇದರ ಜೊತೆಗೆ ಹಲ್ಲಿನ ಕುಳಿತ, ಹಲ್ಲಿನ ನೋವು, ದವಡೆ ಸಮಸ್ಯೆಗಳು ಮತ್ತು ಇತರೆ ದಂತ ಕಾಯಿಲೆಗಳ ಬಗ್ಗೆ ಮಾಹಿತಿ ನೀಡಿ, ಅವುಗಳನ್ನು ತಡೆಯುವ ಸರಳ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ದಂತ ಆರೋಗ್ಯವನ್ನು ನಿರ್ಲಕ್ಷಿಸಿದರೆ ಅದು ದೇಹದ ಇತರೆ ಅಂಗಾಂಗಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು. ನಂತರ ಅವರು ನರ್ಸಿಂಗ್ ವೃತ್ತಿಯ ಮಹತ್ವದ ಕುರಿತು ಮಾತನಾಡಿ, ಸಮಾಜದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ಹೇಳಿದರು. ರೋಗಿಗಳ ಆರೈಕೆ ಮಾಡುವ ನರ್ಸಿಂಗ್ ವೃತ್ತಿ ಅತ್ಯಂತ ಮಾನವೀಯ ಮತ್ತು ಸೇವಾಭಾವ ಹೊಂದಿದ ವೃತ್ತಿಯಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಬೇಕು ಎಂದು ಪ್ರೇರಣಾದಾಯಕವಾಗಿ ಹೇಳಿದರು.

ನರ್ಸಿಂಗ್ ಕ್ಷೇತ್ರದಲ್ಲಿ ಸಹಾನುಭೂತಿ, ಸಹನೆ ಮತ್ತು ಸೇವಾ ಮನೋಭಾವ ಅತ್ಯಂತ ಮುಖ್ಯವೆಂದು ಅವರು ವಿವರಿಸಿದರು. ಕಾರ್ಯಕ್ರಮದ ಅಂತ್ಯದಲ್ಲಿ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು ಮಾತನಾಡಿ, ಡಾ. ನವೀನ್ ಸರ್ ಅವರು ನೀಡಿದ ಉಪನ್ಯಾಸವು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ತಮ್ಮ ಆರೋಗ್ಯದ ಜೊತೆಗೆ ರೋಗಿಗಳ ಆರೋಗ್ಯದ ಮೇಲೂ ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಜೊತೆಗೆ ಸಂಸ್ಥೆಗೆ ಆಗಮಿಸಿ ಅಮೂಲ್ಯವಾದ ಮಾಹಿತಿಯನ್ನು ಹಂಚಿಕೊಂಡ ಡಾ. ನವೀನ್ ಸರ್ ಅವ-ರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಇರ್ಷಾದ್ ಕೆ. ಆಸಿಫ್ ಅವರು ಉಪಸ್ಥಿತರಿದ್ದರು. ಹಾಗೆಯೇ ನರ್ಸಿಂಗ್ ವಿಭಾಗದ ಎಲ್ಲಾ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಉಪನ್ಯಾಸದ ಪ್ರಯೋಜನವನ್ನು ಪಡೆದುಕೊಂಡರು. ಪ್ರತಿ ಶನಿವಾರ ನಡೆಯುವ ಈ ರೀತಿಯ ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಜ್ಞಾನವನ್ನು ವೃದ್ಧಿಸುವುದರ ಜೊತೆಗೆ ಅವರ ವ್ಯಕ್ತಿತ್ವ ವಿಕಾಸಕ್ಕೂ ಸಹಕಾರಿಯಾಗುತ್ತಿವೆ.

# ಅಂಬೇಡ್ಕರ್ ಬಾಲಕಿಯರ ವಸತಿ ನಿಲಯದಲ್ಲಿ ಬಿಂದು ಡೆಂಟಲ್ ಕ್ಲಿನಿಕ್ ವತಿಯಿಂದ ಉಚಿತ ದಂತ ತಪಾಸಣೆ

ನೈಜ್ಯ ದೆಸೆ ನ್ಯೂಸ್

**ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಇಂದು ಸ್ಥಳೀಯ ಅಂಬೇಡ್ಕರ್ ಸರ್ಕಾರಿ ಪೋಸ್ಟ್ ಮೆಟ್ರಿಕ್ ಬಾಲಕಿಂ-ಯರ ಹಾಸ್ಟಲ್‌ನಲ್ಲಿ ಲಯನ್ಸ್ ಕ್ಲಬ್ ಆಶ್ರಯದಲ್ಲಿ ವಿಶೇಷವಾಗಿ ಮಹಿಳಾ ಲಯನ್ಸ್ ನಾಯಕತ್ವದಲ್ಲಿ ಉಚಿತ ಡೆಂಟಲ್ ಚೆಕ್-ಅಪ್ ಕ್ಯಾಂಪ್ ನಡೆಸಲಾಯಿತು.**

ಈ ಕಾರ್ಯಕ್ರಮವು ಬಿಂದು ಡೆಂಟಲ್ ಕ್ಲಿನಿಕ್‌ಗೆ ಸೇರಿದ ಡಾ.ಬಿಂದು ಅವರ ಮೇಲ್ವಿಚಾರಣೆಯಲ್ಲಿ ನಡೆಯಿತು. ಹಾಸ್ಟಲ್‌ನಲ್ಲಿರುವ ಬಾಲಕಿಯ-ರಿಗೆ ದಂತ ಆರೋಗ್ಯದ ಬಗ್ಗೆ ಅರಿವು ಮೂಡಿಸುತ್ತಾ ಉಚಿತವಾಗಿ ದಂತ ತಪಾಸಣೆ ನಡೆಸಲಾಯಿತು. ಈ ಸೇವಾ ಕಾರ್ಯಕ್ರಮದಲ್ಲಿ ಲಯನ್ ತನುಜ,



ಲಯನ್ ಸರೋಜ ಮಾಡಸಿರವಾರ, ಲಯನ್ ಶ್ರೇಯ, ಪದ್ಮ ವೆಂಕಟೇಶ, ರೇಖಾ ಉಡಬಲ್, ಉಷಾ ಪ್ರಭಾಕರ, ಮಂಜುಳ ಜಗದೀಶ, ಹಾಗೂ ಇತರ ಲಯನ್ಸ್ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ನಂತರ ಡಾ.ಬಿಂದು ಮಾತನಾಡಿ, ನಿಮ್ಮ ಹಾಸ್ಟಲ್ ನಲ್ಲಿ ಯಾರಾದರೂ ದಂತ ಸಮಸ್ಯೆಯಿಂದ ಬಳಲುತ್ತಿದ್ದರೆ, ಅವರಿಗೆ ಉಚಿತವಾಗಿ ವೈದ್ಯಕೀಯ ಚಿಕಿತ್ಸೆಯನ್ನು ನೀಡಲಾಗುವುದು ಎಂದು ಭರವಸೆ ನೀಡಿದರು. ಇದೇ ವೇಳೆ ವಿದ್ಯಾರ್ಥಿನಿಯರು, ಡಾ.ಬಿಂದು ಅವರನ್ನು ಸನ್ಮಾನಿಸಿದರು.

# ಪ್ರಸನ್ನ ವೀರಾಂಜನೇಯ ದೇವರ ರಥೋತ್ಸವ

ನೈಜ್ಯ ದೆಸೆ ನ್ಯೂಸ್

**ಹಿರೇಮಾದಿನಾಳ ಗ್ರಾಮದ ಪ್ರಸನ್ನ ವೀರಾಂಜನೇಯ ದೇವರ ರಥೋತ್ಸವ ಶುಕ್ರವಾರ ಸಂಜೆ ವಿಜೃಂಭಣೆಯಿಂದ ನಡೆಯಿತು.ಬೆಳಿಗ್ಗೆ ಮಂತ್ರಾಲಯದ ಕ್ರಿಷ್ಣಾಚಾರ್ಯ ರಾಜಪುರೋಹಿತ ಹಾಗೂ ಎಂ. ಜಯಸಿಂಹಾಚಾರ್ಯ ನೇತೃತ್ವದಲ್ಲಿ ರಥಾಂಗ ಹೋಮ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾ, ಭಕ್ತಿಯಿಂದ ಜರುಗಿದವು.**

ಬಾಲಗೋಪಾಲದಾಸ ಹಾಗೂ ಶಕುಂತಲಾ ಅವರು ಹೋಮಕ್ಕೆ ಪೂರ್ಣಾಹುತಿ ಸಮರ್ಪಿಸಿದರು. ರಥೋತ್ಸವ ನಡೆದಾಗ ಭಕ್ತರು ಬಾಳೆಹಣ್ಣು, ಉತ್ತತ್ತಿ ಎಸೆದು ಧನ್ಯತೆ ಮೆರೆದರು. ಹಿರೇಮಾದಿನಾಳ, ಚಿಕ್ಕಮಾದಿನಾಳ, ಅಗೋಲಿ, ವಿಠಲಾಪುರ, ನಾಗಲಾಪುರ, ರಾಮದುರ್ಗ, ಬಂಕಾಪುರ ಭಾಗವಹಿಸಿದ್ದರು.



ಹೂವು, ದವನ, ಕಾಯಿ, ಕರ್ಪೂರ ಇತರೆ ಪೂಜಾ ಸಾಮಗ್ರಿಗಳ ಖರೀದಿ ಜೋರಾಗಿತ್ತು.

ಗರುಡೋತ್ಸವ: ಪ್ರಸನ್ನ ವೀರಾಂಜನೇಯಸ್ವಾಮಿಯ ರಥೋತ್ಸವ ಶುಕ್ರವಾರ ಸಂಜೆ ವಿಜೃಂಭಣೆಯಿಂದ ನಡೆಯಿತು. ಈ ನಿಮಿತ್ತ ದೇಗುದಲ್ಲಿ ಸೀತಾರಾಮ ಕಲ್ಯಾಣೋತ್ಸವ ಶ್ರದ್ಧೆ, ಭಕ್ತಿಯಿಂದ ನಡೆಯಿತು. ಮಂಗಳಾರುತಿ ಮಾಡುವ ಮೂಲಕ ಗರುಡೋತ್ಸವಕ್ಕೆ ಚಾಲನೆ ನೀಡಲಾಯಿತು. ಗ್ರಾಮದ ಪ್ರಮುಖ ಬೀದಿಯಿಂದ ಅಗಸಿ ಬಾಗಿಲಿನ ಬಸವಣ್ಣ ದೇವಸ್ಥಾನದವರೆಗೆ ನಂತರ ವೀರಾಂಜನೇಯ ದೇವಸ್ಥಾನಕ್ಕೆ ತಲುಪಿತು. ಭಕ್ತರು ಗೋವಿಂದಾ, ಗೋವಿಂದಾ ಎಂಬ ನಾಮ ಸ್ಮರಣೆ ಮಾಡಿದರು. ದೀವಟಗಿ ಹಿಡಿದು ಕರ್ಪೂರ ದಹಿಸಿದರು.

# ಸೌಹಾರ್ದ ಇಫ್ತಾರ ಕೂಟದಲ್ಲಿ ರೈತ ಮುಖಂಡ ಶಿವರಾಜ ಅಭಿಮತ! ಅಸ್ಕಿ ಫೌಂಡೇಶನ್ ಸೇವಾ ಕಾರ್ಯ ಅನುಕರಣೀಯ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಸಮಾಜದ ಎಲ್ಲ ವರ್ಗದ ಜನರ ಸೇವೆಯನ್ನು ತಮ್ಮ ಫೌಂಡೇಶನ್ ದ ಮೂಲಕ ನಿಸ್ವಾಥ-ರ್ದಿಂದ ಮಾಡುತ್ತಿರುವ ಸಿ.ಬಿ.ಅಸ್ಕಿ ಅವರ ಸಮಾಜ ಸೇವಾ ಕಾರ್ಯಗಳು ಎಲ್ಲರಿಗೂ ಅನುಕರಣೀಯವಾಗಿವೆ ಎಂದು ರೈತ ಮುಖಂಡ ಶಿವರಾಜ ಗುಂಡಕನಾಳ ಹೇಳಿದರು. ಪಟ್ಟಣದ ಹಳೇ ತರಕಾರಿ ಮಾರುಕಟ್ಟೆ ಮೈದಾನದಲ್ಲಿ ಶುಕ್ರವಾರ ಸಂಜೆ ಅಸ್ಕಿ ಫೌಂಡೇಶನ್ ಕೊಣ್ಣೂರ ವತಿಯಿಂದ ಆಯೋಜಿಸಿದ ಸೌಹಾರ್ದ ಇಫ್ತಾರ ಕೂಟ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.**

ದಲಿತ ಮುಖಂಡ ಜೈಭೀಮ ಮುತ್ತಗಿ ಮಾತನಾಡಿ ಪವಿತ್ರ ರಮಜಾನ್ ಮಾಸದ ಉಪಾಸ ವೃತಗಳ ಆಚರಣೆಯಿಂದ ದೇಹ ಮತ್ತು ಮನಸ್ಸುಗಳೆರಡೂ ಪರಿಶುದ್ಧವಾಗುತ್ತವೆ. ಉಪವಾಸಗರಿಗೆ ಭೋಜನದ ವ್ಯವಸ್ಥೆ ಮಾಡುವವರಿಗೆ ಉಪಾಸ ಇರುವ




ವ್ಯಕ್ತಿಗೆ ಸಿಗುವಷ್ಟೇ ಪುಣ್ಯ ಸಿಗುತ್ತದೆ ಎಂದು ಪ್ರವಾದಿಗಳು ಹೇಳಿದ್ದಾರೆ ಇಂತಹ ಪುಣ್ಯದ ಕಾರ್ಯವನ್ನು ಅಸ್ಕಿಯವರು ಕಳೆದ ಎಂಟು ವರ್ಷಗಳಿಂದ ಮಾಡುತ್ತಾ ಬರುತ್ತಿದ್ದಾರೆ ಅವರ ಒಳ್ಳೆಯ ಕೆಲಸಗಳಿಗೆ ನಾವೆಲ್ಲರೂ ಸಹಕರಿಸೋಣ ಎಂದರು. ಯುವ ಮುಖಂಡ ವಿಜಯಸಿಂಗ್ ಹಜೇರಿ ಮಾತನಾಡಿ ಯಾವುದೇ ರಾಜ-ಕೀಯ ಸ್ವಾರ್ಥ ಇಲ್ಲದೆ ಸಮಾಜದ ಎಲ್ಲ ವರ್ಗದ ಜನರ ಸೇವೆಯನ್ನು ಅಸ್ಕಿ ಅವರು ಮಾಡುತ್ತಿದ್ದಾರೆ ಅವರೊಬ್ಬ



ಮಾತೃ ಹೃದಯ ಹೊಂದಿದ ವ್ಯಕ್ತಿಯಾಗಿದ್ದಾರೆ ಅವ-ರಿಗೆ ನಾವೆಲ್ಲರೂ ಪ್ರೋತ್ಸಾಹಿಸೋಣ ಎಂದರು.

ಸಮಾಜ ಸೇವಕರಾದ ವಿರೇಶಗೌಡ ಬಾಗೇವಾಡಿ, ಶಮಶುದ್ದೀನ ನಾಲಬಂದ ಹಾಗೂ ಇಬ್ರಾಹೀಮ ಮನ್ಸೂರ ಮಾತನಾಡಿದರು. ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ ಸಮಾರಂಭದ ಸಾನಿಧ್ಯ ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಮಸ್ತ ಮುಸ್ಲಿಂ ಸಮಾಜ ಹಾಗೂ ಮೌಲಾನಾ ಅಬುಲ್ ಕಲಾಂ ಆಜಾದ್ ಫೌಂಡೇಶನ್ ವತಿಯಿಂದ ಸಿ.ಬಿ.ಅಸ್ಕಿ ಅವರನ್ನು ಗೌರವಿಸಲಾಯಿತು. ಪಟ್ಟಣದ ಎಲ್ಲ ಸಮಾಜದ ಬಾಂಧವರು ಸಾವಿರಾರು ಸಂಖ್ಯೆಯಲ್ಲಿ ಸೌಹಾರ್ದ ಇಫ್ತಾರ ಸಾಮೂಹಿಕ ಭೋಜನಕೂಟದಲ್ಲಿ ಭಾಗವಹಿಸಿ ಭಾವೈಕ್ಯತೆಯನ್ನು ಮೆರೆದರು.

ಕಾರ್ಯಕ್ರಮದಲ್ಲಿ ಗಣ್ಯರಾದ ಎಸ್.ಬಿ.ಕಟ್ಟಿಮನಿ, ಮಾಸೂಮಸಾಬ ಕೆಂಭಾವಿ, ನಿರಂಜನಶಾ ಮಕಾಂದಾರ,ಕೆ.ಐ.ಸಗರ, ಮಹೆಬೂಬ ಚೋರಗಸ್ತಿ, ಕಾಸೀಮ ಪಟೇಲ, ಮುಸ್ಲಿಮ್ ಬ್ಯಾಂಕ್ ಅಧ್ಯಕ್ಷ ಮಹಿಬೂಬ ಕೆಂಭಾವಿ, ಫಯಾಜ ಉತ್ನಾಳ, ರವಿ ಕಟ್ಟಿಮನಿ, ಸಿಕಂದರ ಡೋಣಿ, ಹುಸೇನ ಭಾಷಾ ಜಮಾದಾರ,ಮೋದಿನಸಾ ನಗಾರ್ಚಿ,ಡಾ.ನಜೀರ ಕೋಳ್ಯಾಳ,ಆನಂದ ಮದರಕಲ್ಲ, ಅಬೂಬಕರ ಲಾಹೋರಿ, ಆಸೀಫ ಕೆಂಭಾವಿ, ಗೋಪಾಲ್ ಕಟ್ಟಿಮನಿ, ಬಸ್ಸು ಮಾದರ, ನಬಿ ಲಾಹೋರಿ ಶೌಕತ್ ಲಾಹೋರಿ,ಜಾವೀದ ಕೆಂಭಾವಿ, ವೀರೇಶ್ ಅಸ್ಕಿ ಹಾಗೂ ಫೌಂಡೇಶನ್ ಪದಾಧಿಕಾರಿಗಳು ಇದ್ದರು.

## ಸಾಹಿತ್ಯ ಸಿಂಚನ

ಜೀವನವೆಂಬುದು ಒಂದು ದೀರ್ಘ ಪಯಣ,
ಸಂತೋಷ?ದುಃಖಗಳ ಸಂಯೋಜನೆಯ ಸಂಗಮ.

ನಗು ಕಣ್ಣೀರಿನ ನಡುವೆ ಸಾಗುವ ದಾರಿ,
ಪ್ರತಿ ಹೆಜ್ಜೆಯಲ್ಲೂ ಹೊಸ ಅನುಭವದ ಹೊನಲು.

ಬೆಳಗಿನ ಸೂರ್ಯ ಹೊಸ ಆಶೆ ನೀಡುವನು,
ಸಂಜೆಯ ಚಂದ್ರನು ಶಾಂತಿ ತುಂಬುವನು.

ಬಿರುಗಾಳಿ ಬಂದರೂ ನಿಂತು ಹೋಗಬೇಡ,
ಧೈರ್ಯವಿದ್ದರೆ ಗೆಲುವು ದೂರವಲ್ಲ.

ಹೂವಿನಂತೆ ಸುಗಂಧ ಹರಡಲಿ ನಮ್ಮ ನಡೆ,
ಪ್ರೀತಿಯ ಬೆಳಕು ತುಂಬಲಿ ಈ ಭುವನದೆಡೆ.


ಒಳ್ಳೆಯ ಕೆಲಸಗಳೇ ಜೀವನದ ಆಭರಣ,
ಅದೇ ಮಾನವನಿಗೆ ನಿಜವಾದ ಕೀರ್ತಿ ಧನ

ಅಮರೇಶ್

## ಗವಿಮಠದ ಲಿಂ. ಶಿವಶಾಂತವೀರ ಮಹಾಶಿವಯೋಗಿಗಳ 23ನೇ ಪುಣ್ಯ ಸ್ಮರಣೆ

ನೈಜ್ಯ ದೆಸೆ ನ್ಯೂಸ್

**ಗವಿಮಠದ ಲಿಂ. ಶಿವಶಾಂತವೀರ ಮಹಾಶಿವಯೋಗಿಗಳ 23ನೇ ಪುಣ್ಯ ಸ್ಮರಣೆ ಅಂಗವಾಗಿ ನಗರದ ಮಳೇ ಮಲ್ಲೇಶ್ವರ ಬೆಟ್ಟದಿಂದ ಗವಿಮಠದವರೆಗೆ ಗುರುವಾರ ಅಪಾರ ಭಕ್ತಗಣ ಪಾದಯಾತ್ರೆ ನಡೆಸಿತು. ಅಭಿನವ ಗವಿಶ್ರೀಗಳು ಭಕ್ತವೃಂದದೊಂದಿಗೆ ಹೆಜ್ಜೆ ಹಾಕಿದರು.ಪ್ರತಿ ವರ್ಷದಂತೆ ಈ ವರ್ಷವೂ ಕೊಪ್ಪಳ ಸೇರಿ ಗ್ರಾಮೀಣ ಭಾಗದ ಜನರೊಂದಿಗೆ ಯಶಸ್ವಿಯಾಗಿ ಯಾತ್ರೆ ನಡೆಯಿತು.ಬೆಳಗ್ಗೆ 6 ಗಂಟೆಗೆ ಆರಂಭವಾಗಿ 9 ಗಂಟೆ ವೇಳೆಗೆ ಮಠ ತಲುಪಿತು.**



ಮಳೆಮಲ್ಲೇಶ್ವರ ದೇವಸ್ಥಾನದಿಂದ ಅಶೋಕವೃತ್ತ, ಗಡಿಯಾರ ಕಂಬ ವೃತ್ತ ಮಾರ್ಗವಾಗಿ ಶ್ರೀಮಠ ತಲುಪಿತು. ಬಳಗಾನೂರಿನ ಶ್ರೀ ಶಿವಶಾಂತವೀರ ಶರಣರು, ಹೂವಿನಹಡಗಲಿಯ ಶ್ರೀ ಡಾ.ಹಿರಿಶಾಂತವೀರ ಸ್ವಾಮೀಜಿ, ಕಡಲಬಾಳಿನ ಶ್ರೀ ಮರಿಶಾಂತವೀರ ಸ್ವಾಮೀಜಿ, ಬಿಸರಳ್ಳಿಯ ಶ್ರೀ ಶಿವಶಾಂತವೀರ ಸ್ವಾಮೀಜಿ, ಚಿಕ್ಕಮ್ಯಾಗೇರಿ ಮೇಲುಗದ್ದುಗೆ ಹಿರೇಮಠದ ಶ್ರೀಗುರುಶಾಂತವೀರ ಸ್ವಾಮಿಗಳು ಭಾಗಿಯಾಗಿದರು. ವಿವಿಧ ಗ್ರಾಮಗಳ ಭಕ್ತರು, ಶಾಲಾ&ಕಾಲೇಜು ವಿದ್ಯಾರ್ಥಿಗಳು ಪಾದಯಾತ್ರೆ ಮಾಡಿದರು. ದಾರಿಯಲ್ಲಿ ಯಾತ್ರಿಗಳು ಸ್ವಯಂ ಸೇವಕರು ಹಣ್ಣು ನೀಡಿ ಸೇವೆಗೈದರು. ಯಾತ್ರೆ ಬಳಿಕ ಗವಿಸಿದ್ಧೇಶ್ವರ, ಶಿವಶಾಂತವೀರ ಶ್ರೀಗಳ ಕರ್ತೃ ಗದ್ದುಗೆ ದರ್ಶನ ಪಡೆದರು. ಬಳಿಕ ದಾಸೋಹದಲ್ಲಿ ಪ್ರಸಾದ ಸವಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಗರ್ಭಕಂಠದ ಕ್ಯಾನ್ಸರ್ ತಡೆಗಾಗಿ ಹೆಚ್‌ಪಿಇ ಲಸಿಕೆ.

## 14 ವರ್ಷದ ಹೆಣ್ಣು ಮಕ್ಕಳು ಹೆಚ್.ಪಿ.ವಿ ಲಸಿಕೆ ಹಾಕಿಸಲು ಜಾಗೃತಿ

ನೈಜ್ಯ ದೆಸೆ ನ್ಯೂಸ್

**ಮಾನವಿ: ಭವಿಷ್ಯದಲ್ಲಿ ಹೆಣ್ಣು ಮಕ್ಕಳನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ಮುಕ್ತಗೊಳಿಸಲು ನೆಮ್ಮದಿಯ ಜೀವನ ನಡೆಸಲು ಪ್ರಸ್ತುತ 14 ವರ್ಷದ ಹೆಣ್ಣು ಮಕ್ಕಳಿಗೆ ಹಾಕಲಾಗುವ ಹೆಚ್.ಪಿ.ವಿ ಲಸಿಕೆಯನ್ನು ಪಾಲಕರು ಯಾವುದೆ ಹಿಂದೇಟು ಹಾಕದೆ ಲಸಿಕೆ ಹಾಕಿಸಿರಿ, ಇದಕ್ಕಾಗಿ ಎಲ್ಲರೂ ಮುಂದೆ ಬರಬೇಕು ಎಂದು ಕುರ್ಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸಂಗಮೇಶ ವಿನಂತಿಸಿದರು.**

ರಾಯಚೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ ಮಾನವಿ, ಮೂಲಕ ಕುರ್ಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆಚ್‌ಪಿವಿ ಲಸಿಕೆಯನ್ನು 14 ವರ್ಷದ ಶಾಲಾ ಮಕ್ಕಳಿಗೆ ಲಸಿಕೆ ಹಾಕುವ ಪೂರ್ವದಲ್ಲಿ ಮಾತನಾಡಿ, ಹೆಣ್ಣು ಮಕ್ಕಳ ಜೀವನದಲ್ಲಿ ಗಂಭೀರ ಆರೋಗ್ಯ ಸಮಸ್ಯೆಯನ್ನುಂಟು ಮಾಡುವ



ಗರ್ಭಕಂಠದ ಕ್ಯಾನ್ಸರ್ ತಡೆಗೆ ಈ ಲಸಿಕೆ ಅತ್ಯಂತ ಉಪಯುಕ್ತವಾಗಿದ್ದು, ಅನಗತ್ಯ ತಪ್ಪು ಮಾಹಿತಿಗಳಿಗೆ ಕಿವಿಗೊಡದೆ, 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತ ಹೆಚ್.ಪಿ.ವಿ (ಹೂಮನ್ ಪ್ಯಾಪಿಲೋಮ ವೈರಸ್) ವಿರುದ್ಧದ ಲಸಿಕೆ ನೀಡಲಾಗುತ್ತಿದೆ. ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಲಸಿಕೆ ಹಾಕಿಸಲು ಕೋರಿದರು. ಗರ್ಭಕಂಠದ ಕ್ಯಾನ್ಸರ್‌ಗೆ ಕಾರಣಗಳು: ಸಾಮಾನ್ಯವಾಗಿ ವೈಯಕ್ತಿಕ ಶುಚಿತ್ವ, ಜನನಾಂಗಗಳಲ್ಲಿ ತೊಂದರೆ, ಹುಣ್ಣು, ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುವ ಹೂಮನ್



ಪ್ಯಾಪಿಲೋಮ ವೈರಸ್ (ಹೆಚ್.ಪಿ.ವಿ) ಸೋಂಕು ಕ್ರಮೇಣ ಗರ್ಭಕಂಠದ ಜೀವಕೋಶಗಳಲ್ಲಿ ಬದಲಾವಣೆಗಳಾಗಿ ಕ್ಯಾನ್ಸರ್ ಆಗಿ ಬದಲಾಗುತ್ತದೆ. ಈ ಹಿನ್ನಲೆಯಲ್ಲಿ ಮಾರಕವಾಗುವುದನ್ನು ತಡೆಯಲು ಹೆಚ್.ಪಿ.ವಿ ಲಸಿಕೆಯು ಸೂಕ್ತವಾಗಿದೆ.

ಈ ಸಂದರ್ಭದಲ್ಲಿ ಡಾ ಸೌಮ್ಯ ವೈದ್ಯಾಧಿಕಾರಿ, ಮುಖ್ಯೋಪಾಧ್ಯಾಯ ಶಂಕರ, ಶುಶ್ರೂಷಣಾಧಿಕಾರಿ ರಾಧಾ, ಆರೋಗ್ಯ ನಿರೀಕ್ಷಣಾಧಿಕಾರಿ ಅನಿಲ್‌ಕುಮಾರ್, ತರಬೇತಿ ಫಾರ್ಮಸಿ ಅಧಿಕಾರಿ ದೀಪಾ, ಆಶಾ ಕಾರ್ಯಕರ್ತೆ ಸಂತೋಷಮ್ಮ ಸೇ-ರಿದಂತೆ ಶಾಲಾ ಮಕ್ಕಳು ಉಪಸ್ಥಿತರಿದ್ದರು.

## ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಪಾತ್ರ ಮಹತ್ವದ್ದಾಗಿದೆ: ಕೆ.ಬಿ.ಹವಾಲ್ದಾರ್



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಿರಂತರ ಕ್ರಿಯಾಶೀಲರಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಚರಿತ್ರೆಯನ್ನು ತಿಳಿದುಕೊಂಡು ಲಾರ್ಡ್ ಬೆಡೆನ್ ಪಾವೆಲ್ ಅವರ ಆಶಯದಂತೆ ಡಿ.ಎಲ್.ಇಡಿ. ಪ್ರಶಿಕ್ಷಣಾರ್ಥಿಗಳು ತಮ್ಮ ದೈನಂದಿನ ಜೀವನದೊಂದಿಗೆ ಉತ್ತಮ ಸಮಾಜ, ರಾಷ್ಟ್ರ ನಿರ್ಮಾಣ ಮಾಡುವಲ್ಲಿ ಮುಂದಾಗಬೇಕು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರಾಷ್ಟ್ರೀಯ ಸೇವಾ ಸಂಸ್ಥೆಯಾಗಿದೆ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯಪಾಲನೆ, ಪ್ರಾಮಾಣಿಕತನ, ಧೈರ್ಯ ತುಂಬುವ ಕಾರ್ಯ ಮಾಡುತ್ತಿದೆ, ಎಂದು**



**ಉಪನ್ಯಾಸಕ ಕೆ.ಬಿ.ಹವಾಲ್ದಾರ್ ಹೇಳಿದರು.**

ಅವರು ನಗರದ ಸರಕಾರಿ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು ಇವರ ಸಂಯುಕ್ತಾಶ್ರಯಲ್ಲಿ 2025-26 ನೇ ಸಾಲಿನ ಕಬ್ ಮಾಸ್ಟರ್, ಫ್ಲಾಕ್ ಲೀರ?ಸ್ ಗಳಿಗೆ ಹಮ್ಮಿಕೊಂಡಿದ್ದ ಒಂದು ದಿನದ ಪ್ರಾರಂಭಿಕ ಶಿಬಿರವನ್ನು ವಾದ್ಯ ಬಾರಿಸುವುದರ ಮೂಲಕ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಸ್ಕೌಟ್ಸ್ ಗೈಡ್ಸ್ ಮುಕ್ತದಳ ಜಿಲ್ಲಾ ಸಹಾಯಕ ಆಯುಕ್ತ ಬೀರಪ್ಪ ಶಂಭೋಜಿ ಅವರು ಬೆಡನ್ ಪಾವೆಲ್ ಅವರ ಆರು ವ್ಯಾಯಾಮಗಳ ಬಗ್ಗೆ, ಪ್ರತಿಜ್ಞೆ, ಧ್ಯೇಯವಾಕ್ಯ, ಪ್ರಾರ್ಥನಾ ಗೀತೆ, ಧ್ವಜಗೀತೆ, ನಿಯಮ ಹಾಗೂ ನಾಲ್ಕು ಬಂಧಗಳ ಬಗ್ಗೆ ಶಿಬಿರಾರ್ಥಿಗಳಿಗೆ ತಿಳಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಉಪನ್ಯಾಸಕಿ ಮನಿಷಾ ಕಿರ್ಲೋಸ್ಕರ್ ಅವರು ಅಧ್ಯಕ್ಷತೆಯನ್ನು ವಹಿಸಿ ತರಬೇತಿಯ ಸದುಪಯೋಗ ಪಡಿಸಿಕೊಳ್ಳಬೇಕೆಂದು ಹೇಳಿ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತ-ರಿಸಿದರು. ಎಸ್.ಜಿ.ವಿ. ಅಂಬಣ್ಣ ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿ ಶಿಬಿರಾರ್ಥಿಗಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಚಳುವಳಿಯ ಬಗ್ಗೆ ವಿವರಿಸಿದರು ಕಬ್ ಮಾಸ್ಟರ್ ಹಾಗೂ ಸ್ಥಳೀಯ ಸಂಸ್ಥೆಯ ಸಹ ಕಾರ್ಯದರ್ಶಿ ಶಂಕರದೇವರು ಹಿರೇಮಠ, ಸ್ಕೌಟ್ ಮಾಸ್ಟರ್ ಸಿದ್ದಪ್ಪ ಬಸರಕೋಡ, ಗೈಡ್ ಕ್ಯಾಪ್ಟನ್ ಆರತಿ ಮೇಡಮ್, ಉಪನ್ಯಾಸಕರಾದ ರಾಮೇಶ್ವರ ಡಾಣಿ, ಅಂಬಮ್ಮ, ಕೃಷ್ಣ ಉಪಸ್ಥಿತರಿದ್ದರು. ಪ್ರಾರಂಭಿಕ ಶಿಬಿರದಲ್ಲಿ 64 ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

## ಮಸ್ಕಿಯಲ್ಲಿ ಪೊಲೀಸ್ ವಸತಿ ಗೃಹಗಳ ನಿರ್ಮಾಣ ಕಾಮಗಾರಿಗೆ ಶಾಸಕ ಆರ್ ಬಸನಗೌಡ ಚಾಲನೆ

### ನಿಗದಿತ ಅವದಿಯೊಳಗೆ ಗುಣಮಟ್ಟದ ವಸತಿ ಗೃಹ ನಿರ್ಮಿಸಲು ಶಾಸಕ ಆರ್. ಬಸನಗೌಡ ಸೂಚನೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ನಿಗದಿತ ಅವಧಿಯೊಳಗೆ ಗುಣಮಟ್ಟದ ಪಿ.ಸಿ ಪೊಲೀಸ್ ವಸತಿ ಗೃಹಗಳನ್ನು ನಿರ್ಮಿಸಲು ಶಾಸಕ ಆರ್.ಬಸನಗೌಡ ತುರವಿಹಾಳ ಗುತ್ತಿಗೆದಾರನಿಗೆ ಸೂಚಿಸಿದರು. ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ವಿಭಾಗ ಬಳ್ಳಾರಿ ವತಿಯಿಂದ ಪೊಲೀಸ್ ಗೃಹ 2025 ಯೋಜನೆ ಅಡಿಯಲ್ಲಿ ಪಟ್ಟಣದಲ್ಲಿ 12 ಪಿ.ಸಿ ಪೊಲೀಸ್ ವಸತಿ ಗೃಹಗಳ ನಿರ್ಮಾಣ ಕಾಮಗಾರಿಗೆ ಶಾಸಕ ಶನಿವಾರ ಚಾಲನೆ ನೀಡಿದರು.**

ನಂತರ ಮಾತನಾಡಿದ ಅವರು, 3.68 ಕೋಟಿ ಅನುದಾನದಲ್ಲಿ ಈ ವಸತಿ ಗೃಹಗಳನ್ನು ನಿರ್ಮಿಸಲಾಗುತ್ತಿದ್ದು, ಪೊಲೀಸ್ ಸಿಬ್ಬಂದಿಗೆ



ಉತ್ತಮ ವಸತಿ ಸೌಲಭ್ಯ ಒದಗಿಸಲಾಗುವುದು. ಇದರಿಂದ ಪಟ್ಟಣದಲ್ಲಿ ಸೇವೆ ಸಲ್ಲಿಸುತ್ತಿರುವ ಪೊಲೀಸ್ ಸಿಬ್ಬಂದಿಗೆ ವಾಸಸ್ಥಳದ ಸಮಸ್ಯೆ ಪರಿಹಾರವಾಗಲಿದೆ ಎಂದರು. ಪೊಲೀಸ್ ಸಿಬ್ಬಂದಿ ಸಾರ್ವಜನಿಕರ ಭದ್ರತೆಗಾಗಿ ಹಗಲು-ರಾತ್ರಿ ಸೇವೆ ಸಲ್ಲಿಸುತ್ತಿದ್ದು, ಅವ-ರಿಗೆ ಸಮರ್ಪಕ ವಸತಿ ಹಾಗೂ ಮೂಲಸೌಲಭ್ಯ ಒದಗಿಸುವುದು ಎಲ್ಲರ ಆದ್ಯತೆಯಾಗಿದೆ. ಈ ಯೋಜನೆಯಿಂದ ಪೊಲೀಸ್ ಸಿಬ್ಬಂದಿ ಹಾಗೂ ಅವರ ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಲಿಂಗಸುಗೂರು ಡಿವೈಎಸ್‌ಪಿ ದತ್ತಾತ್ರೇಯ ಕರ್ನಾಡ್, ಸಿಪಿಐ ರಮೇಶ ಜಾಲಿಗೇರಿ, ಪಿಎಸ್‌ಐ ಕೆ. ರಂಗಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ,

ನಿರುಪಾದೆಪ್ಪ ಗುಡಿಹಾಳ, ಅಂ-ದಾನಪ್ಪ ಗುಂಡಳ್ಳಿ, ಬಲವಂತರಾಯ ವಟಗಲ್, ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ, ಪುರಸಭೆ ಸದಸ್ಯರು ಸೇರಿದಂತೆ ಇನ್ನಿತರೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳಿದ್ದರು. ವಿವಿಧ ಕಾಮಗಾರಿಗೆ ಚಾಲನೆ: ತಾಲೂಕಿನ ಮಲ್ಲದಗುಡ್ಡ-ಉದ್ಬಾಳ ರಸ್ತೆ ಕಾಮಗಾ-ರಿಗೆ ಹಾಗೂ ಹಾಲಾಪೂರು ಗ್ರಾಮದಲ್ಲಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಸಿಸಿ ರಸ್ತೆಗೆ ಶಾಸಕ ಆರ್.ಬಸನಗೌಡ ಚಾಲನೆ ನೀಡಿದರು.

## ಸರಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ -ಜಾಲಹಳ್ಳಿ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಗ್ರಾಮದ ಸರಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಭಾವನಾತ್ಮಕವಾಗಿ ನೆರವೇರಿತು.**
**ಕಾರ್ಯಕ್ರಮದ ಆರಂಭದಲ್ಲಿ ವಿದ್ಯಾರ್ಥಿಗಳಾದ ಸುರೇಶ್ ಹಾಗೂ ಶ್ರೀನಿವಾಸ್ ಅವರು ಪ್ರಾರ್ಥನಾ ಗೀತೆಯನ್ನು ಹಾಡಿದರು. ಶಾಲೆಯ ಮುಖ್ಯ ಗುರುಗಳಾದ ಶ್ರೀ ನಿಂಗಪ್ಪ ಅವರ ಅಧ್ಯಕ್ಷತೆಯಲ್ಲಿ ಹಾಗೂ ಮುಖ್ಯ ಅತಿಥಿಗಳ ಸಮ್ಮುಖದಲ್ಲಿ ಸರಸ್ವತಿ ಪೂಜೆ ನೆರವೇರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.**

ಕಾರ್ಯಕ್ರಮದ ಪ್ರಸ್ತಾವಿಕ ಭಾಷಣ ಮಾಡಿದ ಹಿಂದಿ ಶಿಕ್ಷಕರಾದ ಶ್ರೀ ಚಿತ್ತಾವಲಿ ಅವರು ಮಾತನಾಡಿ, ಹತ್ತನೇ ತರಗತಿ ವಿದ್ಯಾರ್ಥಿಗಳು ಮುಂದಿನ ಶಿಕ್ಷಣ ಹಂತವಾದ ಕಾಲೇಜು ಜೀವನದತ್ತ ಹೆಜ್ಜೆ ಇಡುತ್ತಿರುವುದು ಸಂತಸದ ವಿಷಯ ಎಂದು ಹೇಳಿದರು. 2025?26ನೇ ಶೈಕ್ಷಣಿಕ ವರ್ಷ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಸವಾಲಿನ ವರ್ಷವಾಗಿದ್ದು, ವಿದ್ಯಾರ್ಥಿಗಳಿಗೆ ಬೆಳಗ್ಗೆ 8:45ರಿಂದ ಸಂಜೆ 5:00ರವರೆಗೆ ನಿರಂತರವಾಗಿ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು. ಪುಸ್ತಕ ಜ್ಞಾನ ಮಾತ್ರವಲ್ಲದೆ ಜೀವನಕ್ಕೆ ಅಗತ್ಯವಾದ ಮೌಲ್ಯಗಳನ್ನು ಕೂಡ ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ ಎಂದು ಹೇಳಿದರು.

ಪರೀಕ್ಷೆಯಲ್ಲಿ ಅಂಕಗಳು ಎಷ್ಟು ಮುಖ್ಯವೋ, ಮೌಲ್ಯಗಳು ಕೂಡ ಅಷ್ಟೇ ಮುಖ್ಯವೆಂದು ತಿಳಿಸಿದ ಅವರು, ವಿದ್ಯಾರ್ಥಿಗಳು ಎಲ್ಲರೊಂದಿಗೆ ಗೌರವದಿಂದ ವರ್ತಿಸಬೇಕು ಎಂದು ಸಲಹೆ ನೀಡಿದರು. ಈ ವರ್ಷ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದುತ್ತಿದ್ದು ಉತ್ತಮ ಫಲಿತಾಂಶ ಬರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.



"ಜೀವನದಲ್ಲಿ ಎರಡು ಕಾಗದಗಳು ಮುಖ್ಯ ಒಂದು ಕಾಗದದ ಹಣ, ಇನ್ನೊಂದು ಪುಸ್ತಕ. ನಾವು ಪುಸ್ತಕವನ್ನು ಆಯ್ಕೆ ಮಾಡಿದರೆ ಹಣ ಸ್ವತಃ ಬರುತ್ತದೆ" ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು. ತಂದೆ-ತಾಯಿಗಳು ಕಷ್ಟಪಟ್ಟು ಮಕ್ಕಳಿಗೆ ಶಿಕ್ಷಣ ನೀಡುತ್ತಿರುವುದರಿಂದ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ತಂದು ಅವರ ಹೆಸರನ್ನು ಬೆಳಗಿಸಬೇಕು ಎಂದು ಹೇಳಿದರು.

ನಿವೃತ್ತ ಪ್ರಿನ್ಸಿಪಾಲರಾದ ಶ್ರೀ ಉಮೇಶ್ ಹೆಸರೂರು ಮಾತನಾಡಿ, ಜಾಲಹಳ್ಳಿ ಸರಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಉತ್ತಮ ಶಿಕ್ಷಕ ವೃಂದವಿದ್ದು ಈ ವರ್ಷ ಉತ್ತಮ ಫಲಿತಾಂಶ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.
ಪತ್ರಕರ್ತರಾದ ಗಿರಿಯಪ್ಪ ಪೂಜಾರಿ ಮಾತನಾಡಿ, ಶಾಲೆಯಲ್ಲಿ ಸರ್ಕಾರದ ಎಲ್ಲಾ ಸೌಲಭ್ಯಗಳಿದ್ದು ವಿದ್ಯಾರ್ಥಿಗಳು ಅವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಫಲಿತಾಂಶ ತಂದು ಶಾಲೆ ಹಾಗೂ ಗ್ರಾಮದ ಹೆಸರನ್ನು ಬೆಳಗಿಸಬೇಕು ಎಂದು ಹೇಳಿದರು.
ಈ ಸಂದರ್ಭದಲ್ಲಿ ಜಾಲಹಳ್ಳಿ ಗ್ರಾಮ ಪಂಚಾಯತ್ ಸದಸ್ಯರಾದ ಅಬ್ದುಲ್ ರೆಹಮಾನ್ ಖುರೇಶಿ ಅವರು ಶಾಲೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದಾಗಿ ಹೇಳಿದ್ದಂತೆ, ವಿದ್ಯಾರ್ಥಿ ಅಯ್ಯನಗೌಡ ವಿಜಯಕುಮಾರ್ ಅವರು ಐದು ವಿಷಯಗಳಲ್ಲಿ 90ಕ್ಕಿಂತ ಹೆಚ್ಚು ಅಂಕ ಪಡೆದ ಹಿನ್ನೆಲೆಯಲ್ಲಿ 5000 ಬಹುಮಾನ ನೀಡಿ ಸನ್ಮಾನಿಸಲಾಯಿತು.

ಇನ್ನೊಬ್ಬ ವಿದ್ಯಾರ್ಥಿಯಾದ ಸಾಬಣ್ಣ ಮುರುಗಪ್ಪ ಅವರು ಕನ್ನಡ ವಿಷಯದಲ್ಲಿ 125ರಲ್ಲಿ 123 ಅಂಕ ಪಡೆದಿದ್ದರಿಂದ ಅವರಿಗೆ ?1000 ಬಹುಮಾನ ನೀಡಿ ಗೌರವಿಸಲಾಯಿತು. ಅಬ್ದುಲ್ ರೆಹಮಾನ್ ಖುರೇಶಿ ಅವರ ಈ ಕಾರ್ಯಕ್ಕೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದವರು ಮೆಚ್ಚುಗೆ ವ್ಯಕ್ತಪಡಿಸಿದರು.
ಅಬ್ದುಲ್ ರೆಹಮಾನ್ ಖುರೇಶಿ ಮಾತನಾಡಿ, ವಿದ್ಯಾರ್ಥಿಗಳು ಸಹೋದರತ್ವದ ಭಾವನೆಯೊಂದಿಗೆ ಬೆಳೆದು ಉತ್ತಮ ಶಿಕ್ಷಣದ ಜೊತೆಗೆ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು.
ಶಿಕ್ಷಕರಾದ ಗದ್ಯಪ್ಪ ಅವರು ವಿದ್ಯಾರ್ಥಿಗಳೊಂದಿಗೆ ಕಳೆದ ದಿನಗಳ ನೆನಪುಗಳನ್ನು ಹಂಚಿಕೊಂಡರು.
ಸಿಆರ್‌ಪಿ ಪಶ್ಚಿಮ ವಲಯದ ಸೋಮಶೇಖರ್ ಮಾತನಾಡಿ, ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು






ಗಮನಹರಿಸಿ ಉತ್ತಮ ಫಲಿತಾಂಶ ತರುವಂತೆ ಸಲಹೆ ನೀಡಿದರು.
ಶ್ರೀ ರಾಘವೇಂದ್ರ ಕುಲಕರ್ಣಿ, ಕಂಪ್ಯೂಟರ್ ತರಬೇತಿ-ದಾರರು (ದೇವದುರ್ಗ) ಅವರು ಜಾಲಹಳ್ಳಿ ಸರಕಾರಿ ಬಾಲಕರ ಪ್ರೌಢಶಾಲೆಗೆ ಒಂದು ಲ್ಯಾಪ್‌ಟಾಪ್ ಅನ್ನು ದೇಣಿಗೆಯಾಗಿ ನೀಡಿದರು.
ಈ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಹತ್ತನೇ ತರಗತಿ ವಿದ್ಯಾರ್ಥಿಗಳು ಬೀಳ್ಕೊಡು ಸಮಾರಂಭದಲ್ಲಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ ಜಾಲಹಳ್ಳಿಯ ಬಾಲಕರ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಗುರುಗಳಾದ ನಿಂಗಪ್ಪ ಹಾಗೂ ಎಲ್ಲಾ ಶಿಕ್ಷಕರು ವೃಂದದ ಬೋಧನೆ ಹಾಗೂ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗೂ ಅಭಿನಂದನೆಗಳ ಮಹಾಪೂರವನ್ನು ಹರಿಸಿದರು
ಇದೇ ಸಂದರ್ಭದಲ್ಲಿ ಅತಿಥಿ ಶಿಕ್ಷಕರನ್ನು ಸನ್ಮಾನಿಸಲಾಯಿತು
ಪತ್ರಕರ್ತರಾದ ಮಾಲಿಂಗ ದೊಡ್ಡಮನಿ ಹಾಗೂ ರಾಜನ ಗೌಡ್ರು ವಿದ್ಯಾರ್ಥಿಗಳ ಮುಂದಿನ ಜೀವನ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಅಧ್ಯಕ್ಷತೆ ಶ್ರೀ ನಿಂಗಪ್ಪ
ಮುಖ್ಯ ಗುರುಗಳು, ಸರಕಾರಿ ಬಾಲಕರ ಪ್ರೌಢಶಾಲೆ ಜಾಲಹಳ್ಳಿ
ಮುಖ್ಯ ಅತಿಥಿಗಳು ಶ್ರೀಮತಿ ವಿಜಯಲಕ್ಷ್ಮಿ ವೆಂಕುಬ ತೋಟದ ಗ್ರಾಮ ಪಂಚಾಯತ್ ಅಧ್ಯಕ್ಷರು, ಜಾಲಹಳ್ಳಿ
ಶ್ರೀ ವೀರೇಶ್ ಅರಕೇರಿ ? ಗ್ರಾಮ ಪಂಚಾಯತ್ ಉಪಾಧ್ಯಕ್ಷರು, ಜಾಲಹಳ್ಳಿ
ಶ್ರೀ ಉಮೇಶ್ ಹೆಸರೂರು ನಿವೃತ್ತ ಪ್ರಿನ್ಸಿಪಾಲರು ಜಾಲಹಳ್ಳಿ
ಶ್ರೀ ರಾಜನ ಗೌಡ ಇಸಿಒ, ಜಾಲಹಳ್ಳಿ
ಶ್ರೀ ರಾಘವೇಂದ್ರ ಕುಲಕರ್ಣಿ ? ಕಂಪ್ಯೂಟರ್ ತರಬೇತಿದಾರರು, ದೇವದುರ್ಗ
ಶ್ರೀ ಸೋಮಶೇಖರ್ ? ಸಿಆರ್‌ಪಿ ಪಶ್ಚಿಮ ವಲಯ, ಜಾಲಹಳ್ಳಿ
ಶ್ರೀ ಕೃಷ್ಣಮೂರ್ತಿ ? ಸಿಆರ್‌ಪಿ, ಗಾಣದಾಳ
ಶ್ರೀ ಅಬ್ದುಲ್ ರೆಹಮಾನ್ ಖುರೇಶಿ ? ಗ್ರಾಮ ಪಂಚಾಯತ್ ಸದಸ್ಯರು ಜಾಲಹಳ್ಳಿ
ಶ್ರೀ ಪ್ರಕಾಶ್ ? ಪ್ರಥಮ ದರ್ಜೆ ಸಹಾಯಕರು, ಜಿಪಿಯು ಕಾಲೇಜ್ ಜಾಲಹಳ್ಳಿ
ಶ್ರೀ ಶಿವು ಮೆಣಸಿನಕಾಯಿ ? ಗ್ರಾಮದ ಹಿರಿಯರು

**ಅತಿಥಿಗಳು**
ಗಿರಿಯಪ್ಪ ಪೂಜಾರಿ ? ಪತ್ರಕರ್ತರು
ಖಾಜಾ ಹುಸೇನ್ ಬಾಬಾ ? ವರದಿಗಾರರುTv20 ಕನ್ನಡ ನ್ಯೂಸ್ ಚಾನೆಲ್
ಮಾಲಿಂಗ ದೊಡ್ಡಮನಿ ? ಪತ್ರಕರ್ತರು
ಈ ಸಂದರ್ಭದಲ್ಲಿ ಶಾಲೆಯ ಎಲ್ಲಾ ಶಿಕ್ಷಕರು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಪಾಲಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ನೇಮಕಾತಿ ಪ್ರಕಟಣೆ

ಯಾದಗಿರಿ ಜಿಲ್ಲಾ ನ್ಯಾಯಾಲಯ ನೇಮಕಾತಿ 2026–14 ಪ್ರೊಸೆಸ್ ಸರ್ವರ್, ಪಿಯೋನ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಯಾದಗಿರಿ ಜಿಲ್ಲಾ ನ್ಯಾಯಾಲಯ ನೇಮಕಾತಿ 2026: 14 ಪ್ರೊಸೆಸ್ ಸರ್ವರ್, ಪಿಯೋನ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಯಾದಗಿರಿ ಜಿಲ್ಲಾ ನ್ಯಾಯಾಲಯದ ಅಧಿಕೃತ ಅಧಿಸೂಚನೆ ಮಾರ್ಚ್ 2026 ರ ಮೂಲಕ ಪ್ರೊಸೆಸ್ ಸರ್ವರ್, ಪಿಯೋನ್ ಹುದ್ದೆಗಳನ್ನು ಭರ್ತಿ ಮಾಡಲು ಯಾದಗಿರಿ ಇ–ಕೋರ್ಟ್ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಯಾದಗಿರಿ–ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 12, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 13–03–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 12–ಏಪ್ರಿಲ್–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 13–04–2026 ಅಧಿಕೃತ ವೆಬ್‌ಸೈಟ್: yadgir.dcourts.gov.in

# ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಒತ್ತಾಯಿಸಿ ಅಹೋರಾತ್ರಿ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರ್ಪಡೆಗೆ ಒತ್ತಾಯಿಸಿ ಮಾ. 16 ರಿಂದ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾಡಿವಾಳ ಮಾಚಿದೇವ ಸೇವಾಸಮಿತಿ ಪ್ರಧಾಕ ಕಾರ್ಯದರ್ಶಿ ದೇವರಾಜ ಮಡಿವಾಳ ಹೇಳಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಸವ ಮಾಚಿದೇವ ಮಹಾಸ್ವಾಮಿ ಚಿತ್ರದುರ್ಗ, ಮುಕ್ತಾನಂದ ಸ್ವಾಮೀಜಿಗಳ ನೇತೃತ್ವದಲ್ಲಿ ನಮ್ಮ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಕೂಗು ಹಲವಾರು ದಶಕಗಳಿಂದ ಕೇಳಿ ಬರುತ್ತಿದೆ. ನಮ್ಮ ಬೇಡಿಕೆ




ಈಡೇರಿಕೆಗೆ ಇಲ್ಲಿಯವರೆಗೆ ಆಡಳಿತ ನಡೆಸಿದ ಯಾವ ಸರ್ಕಾರ ಮಾಡಿಲ್ಲ. ಸ್ವಾತಂತ್ರ ಬಂದಾಗಿನಿಂದಲೂ ನಮ್ಮ ಸಮಾಜವನ್ನು ಬಟ್ಟೆ ಶುದ್ಧ ಮಾಡಲು ಮಾತ್ರ ಬಳಿಸಿಕೊಳ್ಳುತ್ತಾರೆ.

ಈಗಾಗಲೇ ದೇಶದ 18 ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ನಮ್ಮ ಜನಾಂಗವನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಲಾಗಿದೆ. ಆದ್ದರಿಂದ ಈ ರಾಜ್ಯಗಳಲ್ಲಿ ರಾಜಕೀಯವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದಿರುವುದು ಕಾಣುತ್ತದೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ನಮ್ಮ ರಾಜ್ಯದಲ್ಲಿ ನಮಗೆ ಯಾವುದೇ ರೀತಿಯ ಮಾನ್ಯತೆಯನ್ನು ನೀಡದಿರುವುದು ಶೋಚನೀಯವಾಗಿದೆ. ಆದ್ದರಿಂದ ರಾಜ್ಯದಲ್ಲಿರುವ ಪ್ರತಿಯೊಬ್ಬ ಕುಲ ಬಾಂಧವರು.

ಜನಾಂಗದ ಮುಖಂಡರು, ಸಮಾಜದ ವಿವಿಧ ಸಂಘ–ಸಂಸ್ಥೆಗಳ, ರಾಜ್ಯದ ಜಿಲ್ಲಾ ಮತ್ತು ತಾಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ರಾಜ್ಯ ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಪ್ರತಿಭಟಿಸಿ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಒತ್ತಾಯಿಸಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ದುರಗಪ್ಪ, ಲಕ್ಷ್ಮಣ, ದೇವಪ್ಪ ಸೇರಿದಂತೆ ಇನ್ನಿತರರಿದ್ದರು.

## ಕಿಡ್ನಿ ಆರೋಗ್ಯ'ದ ಕುರಿತು ಜಾಗೃತಿ ವಾಕಥಾನ್

ನೈಜ್ಯ ದೆಸೆ ನ್ಯೂಸ್

**ವಿಶ್ವ ಕಿಡ್ನಿ ದಿನದ ಅಂಗವಾಗಿ ಚಿರಾಯು ಆಸ್ಪತ್ರೆಯಿಂದ ನಗರದಲ್ಲಿ ಗುರುವಾರ ವಾಕಥಾನ್ ನಡೆಯಿತು.ಎಲ್ಲರಿಗೂ ಕಿಡ್ನಿ ಆರೋಗ್ಯ–ಜನರ ಕಾಳಜಿ, ಭೂಮಿಯ ರಕ್ಷಣೆ' ಘೋಷ ವಾಕ್ಯದಡಿ ನಡೆದ ವಾಕಥಾನ್‌ನಲ್ಲಿ ಚಿರಾಯು ಆಸ್ಪತ್ರೆಯ ವೈದ್ಯರು–ಸಿಬ್ಬಂದಿ, ಎಚ್‌ಕೆಇ ಸಂಸ್ಥೆಯ ನರ್ಸಿಂಗ್ ಕಾಲೇಜು ಸೇರಿದಂತೆ ವಿವಿಧ ಅರೆ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳು ಹೆಜ್ಜೆಹಾಕಿದರು.**




ಚಿರಾಯು ಆಸ್ಪತ್ರೆಯಿಂದ ಆರಂಭವಾದ ವಾಕಥಾನ್ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತ, ಜಿಲ್ಲಾಡಳಿತ ಭವನ, ಎಸ್.ಬಿ.ಪೆಟ್ರೋಲ್ ಬಂಕ್ ಮೂಲಕ ಜಗತ್ ವೃತ್ತ ತಲುಪಿತು. ಬಳಿಕ ಅಲ್ಲಿಂದ ಜಗತ್ ವೃತ್ತ, ಅನ್ನಪೂರ್ಣ ಕ್ರಾಸ್, ಎಸ್.ಬಿ.ಪೆಟ್ರೋಲ್ ಬಂಕ್ ಮೂಲಕ ಮರಳಿ ಚಿರಾಯು ಆಸ್ಪತ್ರೆ ತಲುಪಿತು. ನಾಲ್ಕು ಕಿ.ಮೀಗೂ ಹೆಚ್ಚು ನಡೆದ ವಾಕಥಾನ್‌ನಲ್ಲಿ ವಿದ್ಯಾರ್ಥಿಗಳು 'ಕಿಡ್ನಿ ಆರೋಗ್ಯ'ದ ಕುರಿತ ತರಹೇವಾರಿ ಭಿತ್ತಿ ಪತ್ರಗಳನ್ನು ಹಿಡಿದು ಜಾಗೃತಿ ಮೂಡಿಸಿದರು. ಘೋಷಣೆಗಳನ್ನೂ ಮೊಳಗಿಸಿದರು. ಈ ವೇಳೆ ಮಾತನಾಡಿದ ಚಿರಾಯು ಆಸ್ಪತ್ರೆ ಮುಖ್ಯಸ್ಥರೂ ಆಗಿರುವ ಕಿಡ್ನಿತಜ್ಞ ಡಾ.ಮಂಜುನಾಥ ದೊಶೆಟ್ಟಿ, 'ಪ್ರತಿ ವರ್ಷ ಮಾರ್ಚ್ ತಿಂಗಳ 2ನೇ ಗುರುವಾರ ವಿಶ್ವ ಕಿಡ್ನಿ ದಿನ ಆಚ–'ರಿಸಲಾಗುತ್ತದೆ. ಸೂಕ್ತ ಮುನ್ನೆಚ್ಚರಿಕೆ ವಹಿಸಿದರೆ ಬಹುತೇಕ ಕಿಡ್ನಿ ಸಮಸ್ಯೆಗಳನ್ನು ತಪ್ಪಿಸಬಹುದು. ಕಿಡ್ನಿ ಆರೋಗ್ಯ ಕುರಿತು ಜಾಗೃತಿ ಮೂಡಿಸುವುದು ಈ ವಾಕಥಾನ್ ಉದ್ದೇಶ' ಎಂದರು. 'ದೇಶದಲ್ಲಿ ದಿನೇದಿನೆ ಕಿಡ್ನಿ ವೈಫಲ್ಯ ಸಮಸ್ಯೆ, ಕಿಡ್ನಿ ಹರಳು ಸಮಸ್ಯೆಗಳು ಹೆಚ್ಚುತ್ತಿದೆ. ಸಕ್ಕರೆ ಕಾಯಿಲೆ, ಪೇನ್ ಕಿಲ್ಲರ್ ಔಷಧ ಬಳಕೆ, ದೂಮಪಾನ, ಮದ್ಯಪಾನದಂಥ ಹಲವು ಕಾರಣಗಳಿವೆ. ಜೊತೆಗೆ ಕಲಬುರಗಿಯಂಥ ಪ್ರದೇಶದಲ್ಲಿ ಬಿಸಿಲು ಹೆಚ್ಚು. ಒಂದೊಮ್ಮೆ ಕಡಿಮೆ ನೀರು ಕುಡಿದರೆ, ಕಿಡ್ನಿಯಲ್ಲಿ ಕಲ್ಲು, ಅದರಿಂದ ಸೋಂಕು, ಅಂತಿಮವಾಗಿ ಕಿಡ್ನಿಯೇ ವೈಫಲ್ಯವೂ ಆಗಬಹುದು. ಹೀಗಾಗಿ ಚೆನ್ನಾಗಿ ನೀರು ಕುಡಿಯಬೇಕು. ಹಣ್ಣುಗಳನ್ನು ಹೆಚ್ಚೆಚ್ಚು ಬಳಸಬೇಕು. ಮದ್ಯಪಾನ, ದೂಮಪಾನ ಮಾಡಬಾರದು' ಎಂದು ಸಲಹೆ ನೀಡಿದರು. ವಾಕಥಾನ್‌ನಲ್ಲಿ ಚಿರಾಯು ಆಸ್ಪತ್ರೆಯ ಡಾ.ಆನಂದ ಶಂಕರ, ಡಾ.ಸಂತೋಷ ಕಾಮಶೆಟ್ಟಿ, ಡಾ.ವಂದನಾ ಕಾಮಶೆಟ್ಟಿ ಸೇ–ರಿದಂತೆ ಡ್ಯೂಟಿ ವೈದ್ಯರು, ನರ್ಸಿಂಗ್ ಸಿಬ್ಬಂದಿ ಪಾಲ್ಗೊಂಡಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಭತ್ತದ ಹೊಲಕ್ಕೆ ಕಳೆನಾಶಕ ಸಿಂಪಡಿಸಿ ಬೆಳೆ ನಾಶಪಡಿಸಿದ ದುಷ್ಕರ್ಮಿಗಳು



ನೈಜ್ಯ ದೆಸೆ ನ್ಯೂಸ್

**ಕಾರಟಗಿ: ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಸೋಮನಾಳ ಗ್ರಾಮದಲ್ಲಿ ರೈತನ ಭತ್ತದ ಬೆಳೆಗೆ ದುಷ್ಕರ್ಮಿಗಳು ಕಳೆನಾಶಕ ಎಣ್ಣೆ ಸಿಂಪಡಿಸಿ ಬೆಳೆ ಹಾನಿಗೊಳಪಡಿಸಿದ ಘಟನೆ ಬೆಳಕಿಗೆ ಬಂದಿದೆ. ಸೋಮನಾಳ ಗ್ರಾಮದ ಸರ್ವೇ ನಂ.132ರಲ್ಲಿ ವೆಂಕನಗೌಡ ಬಸಾಪುರ ಅವರಿಗೆ ಸೇ–ರಿದ ಹೊಲದಲ್ಲಿ ಬೆಳೆದಿದ್ದ ಭತ್ತವು ವಡೆ ಮತ್ತು ಕಾಳು ಕಟ್ಟುವ ಹಂತದಲ್ಲಿದ್ದ ಸಂದರ್ಭದಲ್ಲಿ ಅಪರಿಚಿತರು ರಾತ್ರಿ ವೇಳೆ ಹೊಲಕ್ಕೆ ನುಗ್ಗಿ "ರೌಂಡ್‌ಅಪ್" ಎಂಬ ಕಳೆನಾಶಕ ಎಣ್ಣೆಯನ್ನು ಸಿಂಪಡಿಸಿರುವುದಾಗಿ ತಿಳಿದುಬಂದಿದೆ.**

ಪರಿಣಾಮವಾಗಿ ಭತ್ತದ ಬೆಳೆ ನಿಧಾನವಾಗಿ ಒಣಗಲು ಆರಂಭವಾಗಿದ್ದು, ರೈತನಿಗೆ ಲಕ್ಷಾಂತರ ರೂಪಾಯಿ ನಷ್ಟವಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಬೆಳಿಗ್ಗೆ ಹೊಲಕ್ಕೆ ಬಂದ ರೈತ ವೆಂಕನಗೌಡ ಬಸಾಪುರ ಅವರು ಬೆಳೆ ಹಾನಿಯಾಗಿರುವುದನ್ನು ಗಮನಿಸಿ ಬೆಚ್ಚಿಬಿದ್ದಿದ್ದಾರೆ. ನಂತರ ಈ ಕುರಿತು ಸಂಬಂಧಿಸಿದ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ದೂರು ಸ್ವೀಕರಿಸಿದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಈ ದುಷ್ಕೃತ್ಯ ಎಸಗಿದವರನ್ನು ಪತ್ತೆ ಹಚ್ಚಲು ತನಿಖೆ ಆರಂಭಿಸಿದ್ದಾರೆ.

ರೈತನಿಗೆ ಉದ್ದೇಶಪೂರ್ವಕವಾಗಿ ಹಾನಿ ಮಾಡುವ ಉದ್ದೇಶದಿಂದಲೇ ಈ ಕೃತ್ಯ ನಡೆದಿರುವ ಸಾಧ್ಯತೆ ಇದ್ದು, ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟನೆ ಗ್ರಾಮದಲ್ಲಿ ಆತಂಕ ಹಾಗೂ ಆಕ್ರೋಶಕ್ಕೆ ಕಾರಣವಾಗಿದ್ದು, ರೈತರು ತಮ್ಮ ಬೆಳೆಗಳಿಗೆ ಸುರಕ್ಷತೆ ಒದಗಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

# ಹಾಲಾಪೂರ ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಹಾಲಾಪೂರ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಸಿಸಿ ರಸ್ತೆಗೆ ಭೂಮಿ ಪೂಜೆಯನ್ನ ಶಾಸಕ ಹಾಗೂ ಖಾದಿ ಗ್ರಾಮೋದ್ಯೋಗ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್ ಬಸನಗೌಡ ತುರವಿಹಾಳ ನೆರವೇರಿಸಿದರು.**

ಕಾಮಗಾರಿಯು ಒಂದು ಕೋಟಿ ರೂಪಾಯಿ ಮೊತ್ತದಲ್ಲಿ ಸಿಸಿ ರಸ್ತೆ, ಚರಂಡಿ, ಬೀದಿ ದೀಪ ಅಳವಡಿಸುವ ಕಾಮಗಾ–ರಿಯಾಗಿದೆ, ಹೀಗಾಗಿ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು, ಗುತ್ತಿಗೆದಾರರು ಕೆಲಸವನ್ನು ಗುಣಮಟ್ಟದ ಮತ್ತು ಸರಿಯಾದ ಸಮಯಕ್ಕೆ ಕೆಲಸ ಮುಗಿಸಿ ಜನರಿಗೆ ಅನುಕೂಲತೆ



ಮಾಡಬೇಕು, ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿಪರ ಕೆಲಸಗಳನ್ನು ಮಾಡುತ್ತಿದ್ದು, ಈಗಾಗಲೇ ಬೇಸಿಗೆ ಆರಂಭವಾಗಿದ್ದು ಆಯಾ ಗ್ರಾಮ ಪಂಚಾಯತಿಯ ಪಿಡಿಒ ಮತ್ತು ಸಿಬ್ಬಂದಿಯವರು ತಮ್ಮ ತಮ್ಮ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಬೇಕು,

ಅದಕ್ಕೆ ಅವ್ಯವಸ್ಥೆ ಕಂಡು ಬಂದರೆ ಅದಕ್ಕೆ ನೇರ ಹೊಣೆ ಗ್ರಾಮ ಪಂಚಾಯತಿಯ ಪಿಡಿಒ ಅವರ ಮೇಲೆ ಸೂಕ್ತಕ್ರಮ ಕೈಗೊಳ್ಳಲಾಗುವುದು, ಮುಖ್ಯವಾಗಿ ಪ್ರಸ್ತುತ ಕುಡಿಯುವ ನೀರಿಗೆ ಮೊದಲ ಆದ್ಯತೆ ಎಂದು ಹೇಳುತ್ತಾ, ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಮತ್ತಷ್ಟು ಜನಪರ ಕೆಲಸವನ್ನು ಮಾಡಲಾಗುವುದು ಎಂದು ಶಾಸಕ ಆರ್ ಬಸನಗೌಡ ತುರವಿಹಾಳ ಹೇಳಿದರು. ಈ ವೇಳೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ ಹಾಗೂ ಮುಖಂಡರು, ಅಧಿಕಾರಿಗಳು, ಗುತ್ತಿಗೆದಾರರು ಇದ್ದರು.

# ಅಡುಗೆ ಅನಿಲ ಪೂರೈಕೆಯಲ್ಲಿ ತೊಂದರೆ ಇಲ್ಲ



ನೈಜ್ಯ ದೆಸೆ ನ್ಯೂಸ್

**ಕವಿತಾಳ: 'ಗೃಹ ಬಳಕೆ ಅಡುಗೆ ಅನಿಲ ಪೂರೈಕೆಯಲ್ಲಿ ಯಾವುದೇ ತೊಂದರೆ ಇಲ್ಲ, ಆದರೇ ನಗರ ಪ್ರದೇಶದ ಜನತೆಗೆ ಗೃಹ ಬಳಕೆಗೆ 30 ದಿನಗಳ ಅಂತರ ಮತ್ತು ಗ್ರಾಮೀಣ ಪ್ರದೇಶದ ಜನತೆಗೆ 45 ದಿನಗಳ ಅಂತರದಲ್ಲಿ ಕಡ್ಡಾಯವಾಗಿ ಆನ್‌ಲೈನ್ ಮೂಲಕ ಬುಕಿಂಗ್ ಮಾಡಿ ಅನಿಲ ಸಿಲೇಂಡರ್ ಪಡೆಯಬಹುದಾಗಿದೆ,**

ಗ್ರಾಹಕರು ಸಹಕರಿಸುವ ಮೂಲಕ ತಮ್ಮ ಗ್ಯಾಸ್ ಸಿಲೆಂಡರ್ ಬುಕ್ ಮಾಡಿಕೊಂಡು ಪಡೆಯಲು ಯಾವುದೆ ತೊಂದರೆ ಇಲ್ಲ'ಎಂದು ಅಡುಗೆ ಅನಿಲ ವಿತರಕರು ತಿಳಿಸಿದ್ದಾರೆ. 'ಗ್ರಾಹಕರು ಅನಗತ್ಯ ಆತಂಕ ಮತ್ತು ಅವಸರ ಪಡುವ ಅಗತ್ಯ ಇಲ್ಲ ತಮ್ಮ ಬುಕಿಂಗ್ ದಿನಾಂಕಕ್ಕೆ ತಕ್ಕಂತೆ ಸಿಲೆಂಡರ್ ವಿತರಿಸಲಾಗುವುದು ಹಾಗೂ ಹೋಟಲ್, ಶಾಲೆಗಳಿಗೆ ಮತ್ತು ಇನ್ನಿತರ ಕಮರ್ಷಿಯಲ್ ಬಳಕೆಗೆ ಕಮರ್ಷಿಯಲ್ ಗ್ಯಾಸ್ ವಿತರಿಸಲಾಗುವುದು' ಎಂದು ಹೇಳಿದ್ದಾರೆ.

'ಕಾಳ ಸಂತೆಯಲ್ಲಿ ಮಾರಾಟ ಮಾಡುವವರಿಗೆ ಬುಕಿಂಗ್ ಕಡ್ಡಾಯಗೊಳಿಸಿದ್ದ–ರಿಂದ ತೊಂದರೆ ಯಾಗಿದ್ದು ಅಡುಗೆ ಅನಿಲವಿತರಣೆ ಕುರಿತು ಇಲ್ಲಸಲ್ಲದ ಸುದ್ದಿಗಳನ್ನು ಹರಡುತ್ತಿದ್ದು ಗ್ರಾಹಕರು ಯಾವುದಕ್ಕು ಕಿವಿಗೊಡಬೇಡಿ ಮತ್ತು ಎಲ್ಲರೂ ಬುಕಿಂಗ್ ಮಾಡುತ್ತಿರುವ ಕಾರಣ ಸರ್ವರ್ ಬ್ಯುಸಿ ಇರುತ್ತದೆ ಇದರಿಂದ ಬುಕಿಂಗ್ ತಡವಾಗಬಹುದು ಆದ್ದರಿಂದ ಕಡ್ಡಾಯವಾಗಿ ಬುಕಿಂಗ್ ಮಾಡಿ ತಮ್ಮ ಬುಕಿಂಗ್ ಸಮಯ್ಯಕೆ ತಕ್ಕಂತೆ ಅಡುಗೆ ಅನಿಲ ಪಡೆಯಬಹುದಾಗಿದೆ' ಎಂದು ಹೇಳಿದರು.

# ಅರಿವಿನ ಕೊರತೆಯಿಂದ ಹೆಣ್ಣಿನ ಮೇಲೆ ಅಮಾನವೀಯ ಘೋಷಣೆಗಳು ನಡೆಯುತಿವೆ. ಹೆಣ್ಣನ್ನು ಆತ್ಮಗೌರವದಿಂದ ಕಾಣಬೇಕು: ಶೈಲಜಾ ಹಿರೇಮಠ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಯಿ ತನ್ನ ಮಗುವಿಗೆ ನಿಮ್ಮ ತಂದೆ ಇವರು ಎಂದು ಹೇಳುವುದು ಕೂಡ ಹೆಣ್ಣೇ,– ಎಲ್.ಬಿ.ಕೆ ಪದವಿ ಪೂರ್ವ ಮತ್ತು ನೊಬಲ್ ಪದವಿ ಮಹಾವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಭ್ರಮದಲ್ಲಿ ಸಾಮಜ ಚಿಂತಕಿ ಶೈಲಜಾ ಹಿರೇಮಠ ಅವರ ಅಭಿಮತ ಪುರುಷ ಪ್ರಧಾನ ಸಮಾಜದ ಈ ಜಾಗತಿಕ ವಲಯದಲ್ಲಿ ಲಿಂಗ ಅಸಮಾನತೆ ಖಂಡನೆ ವಿಚಾರ ಈ ದೇಶಕ್ಕೆ ಸ್ವಾತಂತ್ರ್ಯ ಬಂದು 79 ವರ್ಷಕ್ಕೂ ಹೆಚ್ಚಿನ ಈ ಕಾಲಘಟ್ಟದಲ್ಲಿ 50ರಷ್ಟು ಈ ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪಾತ್ರ ಇದೆ ಆದರೆ ಹೆಣ್ಣು ಇಂತಹ ದೇಶದಲ್ಲಿ ಹೆಣ್ಣು ಎಷ್ಟು ಸುರಕ್ಷಿತ ಎಂಬುದನ್ನ ನಾವೆಲ್ಲರೂ ಆತ್ಮಲೋಕನ ಮಾಡಿಕೊಳ್ಳುವ ಕಾಲಘಟ್ಟದಲ್ಲಿದ್ದೇವೆ.**

ಪ್ರತಿ ದಿನವೂ ಹೆಣ್ಣು ಆತಂಕದಿಂದ ಬದುಕಬೇಕಾಗಿದೆ ಪ್ರತಿನಿತ್ಯವು ಹೆಣ್ಣು ಎನ್ನುವ ಕಾರಣ–ಕ್ಕಾಗಿ ಭ್ರೂಣ ಅತ್ತೆ ವರದಕ್ಷಿಣೆ ಕಿರುಕುಳ ಬಾಲ್ಯ ವಿವಾಹ ದೇವದಾಸಿ ಪದ್ಧತಿ ಅಂತಹ ಅನಿಷ್ಠ ಪದ್ಧತಿಗಳ ನಡುವೆ ಉದ್ಯೋಗ ಸ್ಥಳದಲ್ಲಿಯೂ ಹೆಣ್ಣು ಲೈಂಗಿಕ ಕಿರುಕುಳುಗಳಂತಹ ಶೋಷಣೆಗೆ ಒಳಗಾಗುತ್ತಿರುವುದು ಖಂಡನೆಯ ಇದಕ್ಕೆ ಇದಕ್ಕೆಲ್ಲ ಕಾರಣ ಹೆಣ್ಣಿಗೆ ಕೊರತಿಯಿಂದಾಗಿ ಇಂತಹ ಅಪಾಯಗಳು ನಮ್ಮೆದುರು ದಿನನಿತ್ಯ ಕಾಣಿಸಿಕೊಳ್ಳುತ್ತದೆ 18ನೇ ಶತಮಾನದಿಂದಲೂ ಇವತ್ತಿನವರೆಗೂ ಒಂದಲ್ಲ ಒಂದು ಕಾರಣಕ್ಕಾಗಿ ಹೆಣ್ಣಿನ ಮೇಲೆ ನಡೆದ ಶೋಷಣೆಯನ್ನ ವಿರೋಧಿಸುತ್ತಾ ಬಂದರು ಪ್ರತಿಭಟಿಸುತ್ತಾ ಬಂದರು ಅದಕ್ಕೆ ಅಂತ್ಯ ಆಡಲು ಆಗುತ್ತಿರುವ ವಿಷಾದನೀಯ ಸಂಗತಿ ಎಂದು ಸಿಂಧನೂರು ನಗರದ




ಎಲ್.ಬಿ.ಕೆ ಪದವಿ ಪೂರ್ವ ಮತ್ತು ನೊಬಲ್ ಪದವಿ ಮಹಾವಿದ್ಯಾಲಯ ಸಿಂಧನೂರು ಎನ್ ಎಸ್ ಎಸ್ ಮತ್ತು ಐ.ಕ್ಯೂ .ಎ.ಸಿ ಸಹಯೋಗದೊಂದಿಗೆ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಂಭ್ರಮದ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಗಂಗಾವತಿಯ ಸಮಾಜ ಚಿಂತಕರಾದ ಶ್ರೀಮತಿ ಶೈಲಜಾ ಇವರು ಮಾತನಾಡಿದರು.

ಜಾಗತಿಕ ಮಟ್ಟದಲ್ಲಿ ಮಹಿಳೆಯರ ಶೋಷಣೆಯ ಸ್ಥಿತಿಗತಿಗಳ ಕುರಿತು ಸವಿವರವಾಗಿ ತಿಳಿಸುತ್ತಾ , ಮಹಿಳಾ ಹಿಂದುಳಿಯುವುದಕ್ಕೆ ನೇರವಾಗಿ ಸಮಾಜವೇ ಕಾರಣ ಎಂದು ಸಮಾಜವನ್ನು ಖಂಡಿಸಿ ಮಾತಾಡಿದರು. ಅತಿ ಹೆಚ್ಚು ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಜರುಗುತ್ತದೆ. ಒಂದು ವೇಳೆ ಒಬ್ಬ ದಲಿತ ಮಹಿಳೆಯ ಮೇಲೆ ಆಗುವ ದರ್ಪ ದಬ್ಬಾಳಿಕೆ ಶೋಷಣೆ ಅತ್ಯಾಚಾರ ಇವು ಯಾವಾಗ ನಿಲ್ಲುತ್ತೋ ಆಗ ಎಲ್ಲಾ ವರ್ಗದ ಮಹಿಳೆಯರು ಸಮಾಜದಲ್ಲಿ ರಕ್ಷಣೆಗೆ ಒಳಪಡುತ್ತಾರೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ಜಗತ್ತಿನ ಹಲವು ಮಹಿಳಾ ಸಾಧಕರನ್ನು ಸ್ಮರಿಸಿ, ಅವರ ಆದರ್ಶಗಳು ಇಂದಿಗೆ ಮಹಿಳೆಯರಿಗೆ ಮಾದರಿ ಎಂದು ತಿಳಿಸಿದರು ಈ ದೇಶದಲ್ಲಿ ಹೆಣ್ಣನ್ನ ಸಹನಶೀಲಳು ಭೂಮಿ ತೂಕದವಳು ತಾಯಿ ತಂಗಿ ಮಡದಿ ಅಜ್ಜಿ ಎಂಬೆಲ್ಲ ಸಹಾನುಭೂತಿಯ ಮಾತುಗಳನ್ನಾಡಿ ಪ್ರಸ್ತುತ ದಿನಮಾನಗಳಲ್ಲಿ ಹೆಣ್ಣಿಗೆ ದ್ವನಿಯನ್ನ ಕಿತ್ತಿಕೊಂಡ ಪುರುಷ ಪ್ರಧಾನ ಸಮಾಜ ತನ್ನ ಪಾರು ಪಾತ್ತ್ಯತೆಯನ್ನು ಮೆರೆಯುತ್ತಿರುವುದು ವಿಷಾದೀಯ ಸಂಗತಿ ಎಂದು ವರ್ತಮಾನದ ಘಟನೆಗಳನ್ನ ಮುಖಾಮುಖಿಯಾಗಿ ಆತ್ಮಾವಲೋಖಿಸಿದರು.

ಒಬ್ಬ ತಾಯಿ ಮಾತ್ರ ತನ್ನ ಮಗುವಿಗೆ ಇವರೇ ನಿಮ್ಮ ತಂದೆ ಎಂದು ಹೇಳುವ ನೈತಿಕತೆ ಇರುವುದು ಅದು ಹೆಣ್ಣಿಗೆ ಮಾತ್ರ ಸಾಧ್ಯ ಎಂದು ಹೆಣ್ಣಿನ ಅಸ್ಮಿತೆಯ ಕುರಿತು ಮಾತನಾಡಿ ಈ ಸಮಾಜದಲ್ಲಿ ಹೆಣ್ಣನ್ನ ಆತ್ಮಗೌರವದಿಂದ ಕಾಣುವುದಿಲ್ಲವೋ ಆ ಸಮಾಜ ಅಭಿವೃದ್ಧಿ ಆಗಲು ಸಾಧ್ಯವಿಲ್ಲ ಆ ಸಮಾಜ ಸ್ವಸ್ಥ ಸಮಾಜ ನಿರ್ಮಾಣ ಆಗಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಸಿಗೆ ನೀರ್ ಯಾರದು ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾಲೇಜಿನ ಹಳೆ ವಿದ್ಯಾರ್ಥಿನಿ ಮತ್ತು ಸರಕಾರಿ ಪದವಿ ಮಹಾವಿದ್ಯಾಲಯದ ಇಂಗ್ಲೀಷ ಉಪನ್ಯಾಸಕಿ ಕುಮಾರಿ ತಜರಿನ್ ರೌಡಕುಂದಾ ಮಾತನಾಡಿ ಹೆಣ್ಣಿಗೆ ಕುಟುಂಬದಿಂದಲೇ ತಾರತಮ್ಯವಾಗುತ್ತಿದೆ. ಮೊದಲು ಕುಟುಂಬದವರನ್ನು ಪ್ರಶ್ನಿಸಿ ನಂತರ ಸಮಾಜದಲ್ಲಿನ ಶೋಷಣೆಯಿಂದ ಮುಕ್ತರಾಗಲು ಸಾಧ್ಯ ಹೆಣ್ಣಿಗೆ ಹೆಣ್ಣಿನಿಂದಲೇ ಸ್ವಾತಂತ್ರ್ಯ ಸಿಗಬೇಕಾಗಿದೆ. ಹೆಣ್ಣಿನಿಂದ ಹೆಣ್ಣಿಗೆ ಸಮಾನತೆ ಸಿಗಬೇಕಾಗಿದೆ. ಈ ನೆಲದಲ್ಲಿ ಸಮಾನತೆಗಾಗಿ ದ್ವನಿಯೆತ್ತಿದ ಎಲ್ಲಾ ಮಹನೀಯರ ಪಾತ್ರ ಅವಿಸ್ಮರಣೆ ವಾದದ್ದು.

ಆದಾಗ್ಯೂ ಪ್ರಸ್ತುತ ಕಾಲಘಟ್ಟದಲ್ಲಿ ಸಮಾನತೆಗಾಗಿ ನಾವು ಯಾರನ್ನು ಅವಲಂಬಿಸಬೇಕಿಲ್ಲ ಮತ್ತು ನಮಗೆ ನಾವೇ ಲಕ್ಷ್ಮ ರೇಖೆ ಹಾಕಿಕೊಂಡು ಬದುಕುವ ಅಗತ್ಯತೆಯೂ ಇಲ್ಲ ಯಾವ ಹೆಣ್ಣು ಆರ್ಥಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಶೈಕ್ಷಣಿಕವಾಗಿ ಮುಂದೆ ಬಂದು ಸ್ವಾವಲಂಬನೆಯ ಬದುಕನ್ನ ಕಟ್ಟಿಕೊಂಡಾಗ ಮಾತ್ರ ಹೆಣ್ಣಿಗೆ ಈ ಸಮಾಜದಲ್ಲಿ ಗೌರವ ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ಕಾರ್ಯಕ್ರಮದಲ್ಲಿಬಅತಿಥಿಗಳಾಗಿ ಕಾಲೇಜಿನ ಎಲ್ಲಾ ಮಹಿಳಾ ಉಪನ್ಯಾಸಕರಾದ ಕುಮಾರಿ ಜ್ಯೋತಿ, ನಂದಿನಿ, ಅಶ್ವಿನಿ,ಕಾವೇರಿ, ಕವಿತಾ,ಅನ್ನಪೂರ್ಣ ಹಾಗೂ ವಿಧ್ಯಾರ್ಥಿ ಪ್ರತಿನಿಧಿಗಳಾದ ಕುಮಾರಿ ಅಕ್ಕಮಹಾದೇವಿ, ನಿಸರ್ಗ, ಗಾಯಿತ್ರಿ, ಮಾಯಮ್ಮ ಬಿಕಾಂ ಮತ್ತು ಕಾಲೇಜಿನ ಪರಿಚಾರಕರಾದ ಶ್ರೀಮತಿ ಹುಸೇನಮ್ಮ, ಫಾತಿಮಾ ಅಕ್ಕ ಇವರು ಉಪಸ್ತಿತರಿದ್ದರು.

ವಿದ್ಯಾರ್ಥಿಗಳಾದ ಅಕ್ಕಮಹಾದೇವಿ ,ಅನಿಲ್ ಬಿಕಾಂ, ಬಸಮ್ಮ ಮತ್ತು ಜ್ಯೋತಿಯವರು ಮಹಿಳಾ ದಿನಾಚರಣೆ ಕುರಿತು ಅದರ ಇತಿಹಾಸ ಮತ್ತು ಮಹತ್ವವನ್ನು ವಿಧ್ಯಾರ್ಥಿ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ವೇದಿಕೆ ಮೇಲೆ ಇದೆಲ್ಲ ಮಹಿಳೆಯ–ರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಪರಶುರಾಮ ಮಲ್ಲಾಪುರ್ ಕಾರ್ಯದರ್ಶಿಯಾದ ಡಾ. ಅರುಣ–ಕುಮಾರ್ ಬೇರಿಗೆ ಉಪಾಧ್ಯಕ್ಷರಾದ ಶಂಕರಪ್ಪ ಖಜಾಂಚಿಗಳಾದ ಜಯಪ್ಪ ಗೊರೆಬಾಳ್ ಹಾಗೂ ಐ ಕ್ಯೂ ಎ.ಎಸ್ ಸಂಯೋಜಕರಾದ ಹೊನ್ನಪ್ಪ ಬೆಳಗುರ್ಕಿ, ವೆಂಕೋಬ ಬುದಿವಾಳ, ಸುರೇಶ್ ಮುಳ್ಳೂರು ಪಂಪಾಪತಿ ,ಶರಣಬಸವ ಮೌಲಾಸಾಬ್ ವಸಂತಕುಮಾರ್ ಬೀರಪ್ಪ ಕೃಷ್ಣಪ್ಪ ಬಾಲಪ್ಪ ನಾಗರಾಜ್ ಮತ್ತು ಎಲ್ ಬಿ.ಕೆ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶಿವಕುಮಾರ್ ಬಿಂಗಿ ಇನ್ನಿತರರು ಉಪಸ್ಥಿತರಿದ್ದರು ಈ ಕಾರ್ಯಕ್ರಮವನ್ನು ಕುಮಾರಿ ಶಮೀನಾ ಪಿಯುಸಿ ವಿಭಾಗ ನಿರೂಪಿಸಿದರು, ಜಾನ್, ಅಗ್ನಿ ,ಮತ್ತು ದಿನೇಶ್ ಪ್ರಾರ್ಥಿಸಿದರು ,ತಿಮ್ಮಣ್ಣ ನಾಯಕ್ ಸ್ವಾಗತಿಸಿದರು, ಬಸವರಾಜ ವಿಧ್ಯಾರ್ಥಿ ಸನ್ಮಾನ ಕಾರ್ಯಕ್ರಮ ನಿರ್ವಹಿಸಿದರು, ನಾಗರಾಜ ವಂದಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ


### ಸೌಂಡ್ ಮತ್ತು ರೆಕಾರ್ಡ್ ಇಂಜಿನಿಯರಿಂಗ್

ಸೌಂಡ್ ಮತ್ತು ರೆಕಾರ್ಡ್ ಇಂಜಿನಿಯರಿಂಗ್ (ಆಡಿಯೋ ಇಂಜಿನಿಯರಿಂಗ್) ಕೋರ್ಸ್ ಧ್ವನಿ ರೆಕಾರ್ಡಿಂಗ್, ಎಡಿಟಿಂಗ್, ಮತ್ತು ಮಿಕ್ಸಿಂಗ್ ತಂತ್ರಗಳನ್ನು ಕಲಿಸುತ್ತದೆ.ಧ್ವನಿ ಎಂಜಿನಿಯರಿಂಗ್ ಅಥವಾ ಆಡಿಯೊ ಎಂಜಿನಿಯರಿಂಗ್ ಎಂದರೆ ಧ್ವನಿ, ಅದರ ಗುಣಲಕ್ಷಣಗಳು ಮತ್ತು ಅದರ ಸ್ವರೂಪದ ಅಧ್ಯಯನ. ವಿದ್ಯಾರ್ಥಿಗಳು ಧ್ವನಿ ಸೆರೆಹಿಡಿಯುವಿಕೆ, ರೆಕಾರ್ಡಿಂಗ್ ಮತ್ತು ಸಂಪಾದನೆಗೆ ಸಂಬಂಧಿಸಿದ ತಾಂತ್ರಿಕ ಮತ್ತು ಸೃಜನಶೀಲ ವಿಷಯಗಳನ್ನು ಕಲಿಯುತ್ತಾರೆ. ಧ್ವನಿ ಎಂಜಿನಿಯರಿಂಗ್ ಪ್ರವೇಶವು ಪ್ರವೇಶ ಮತ್ತು 12 ನೇ ತರಗತಿಯ ಅಂಕಗಳನ್ನು ಆಧರಿಸಿದೆ. ಅರ್ಹತೆ ಪಡೆಯಲು ಅಭ್ಯರ್ಥಿಗಳು 12 ನೇ ತರಗತಿಯಲ್ಲಿ 50% ರಷ್ಟು ಉತ್ತೀರ್ಣರಾಗಿರಬೇಕು. ಪರೀಕ್ಷೆಗಳು ಅಗಇಖ ಮತ್ತು ಎಇಇ ಮುಖ್ಯ. 12ನೇ ತರಗತಿಯಲ್ಲಿ (ವಿಜ್ಞಾನ/ಕಲೆ) ಕನಿಷ್ಠ 50% ಅಂಕಗಳೊಂದಿಗೆ ಉತ್ತೀರ್ಣರಾದವರು ಅರ್ಹರು. ಡಿಪ್ಲೊಮಾ, ಬಿಎಸ್ಸಿ (B.Sc) ಪದವಿಗಳು ಲಭ್ಯವಿದ್ದು, 1–3 ವರ್ಷಗಳ ಅವಧಿಯ ಈ ಕೋರ್ಸ್‌ನಲ್ಲಿ ತಾಂತ್ರಿಕ ಜ್ಞಾನ ಮತ್ತು ಸೃಜನಶೀಲತೆಗೆ ಒತ್ತು ನೀಡಲಾಗುತ್ತದೆ. ಸೌಂಡ್ ಮತ್ತು ರೆಕಾರ್ಡ್ ಇಂಜಿನಿಯರಿಂಗ್ ಕೋರ್ಸ್ ವಿವರಗಳು: ಕೋರ್ಸ್ ಪ್ರಕಾರಗಳು: ಡಿಪ್ಲೊಮಾ/ಸರ್ಟಿಫಿಕೇಟ್ ಕೋರ್ಸ್: 6 ತಿಂಗಳಿಂದ 1 ವರ್ಷ (ಬೇಸಿಕ್ ರೆಕಾರ್ಡಿಂಗ್). ಬಿ.ಎಸ್ಸಿ (B.Sc) ಆಡಿಯೋ/ಸೌಂಡ್ ಇಂಜಿನಿಯರಿಂಗ್: 3 ವರ್ಷಗಳ ಪದವಿ ಕೋರ್ಸ್. ಪ್ರಮುಖ ವಿಷಯಗಳು: ಧ್ವನಿ ವಿಜ್ಞಾನ (Sound Physics) ಮತ್ತು ಅಕೌಸ್ಟಿಕ್ಸ್. ರೆಕಾರ್ಡಿಂಗ್ ತಂತ್ರಗಳು (Microphone Techniques). ಡಿಜಿಟಲ್ ಆಡಿಯೋ ವರ್ಕ್‌ಸ್ಟೇಷನ್ (DAW - Pro Tools, Logic Pro). ಮಿಕ್ಸಿಂಗ್ ಮತ್ತು ಮಾಸ್ಟರಿಂಗ್ (Mixing & Mastering). ಲೈವ್ ಸೌಂಡ್ ಇಂಜಿನಿಯರಿಂಗ್ (Live Sound). ಅರ್ಹತೆ: 12ನೇ ತರಗತಿ (10+2) ಉತ್ತೀರ್ಣ. ವಿಜ್ಞಾನ ವಿಭಾಗಕ್ಕೆ (PCM) ಆದ್ಯತೆ, ಆದರೆ ಕಲೆ/ವಾಣಿಜ್ಯದವರಿಗೂ ಅವಕಾಶವಿದೆ. ಉದ್ಯೋಗಾವಕಾಶಗಳು: ರೆಕಾರ್ಡಿಂಗ್ ಸ್ಟುಡಿಯೋ ಇಂಜಿನಿಯರ್. ಚಲನಚಿತ್ರ/ಟಿವಿ ಆಡಿಯೋ ಪೋಸ್ಟ್-ಪ್ರೊಡಕ್ಷನ್. ಲೈವ್ ಸೌಂಡ್ ಇಂಜಿನಿಯರ್ (ಕನ್ಸರ್ಟ್‌ಗಳು). ರೇಡಿಯೋ ಜಾಕಿ/ಆಡಿಯೋ ಎಡಿಟರ್. ಸೌಂಡ್ ಎಂಜಿನಿಯರಿಂಗ್‌ನಲ್ಲಿ ಉನ್ನತ ನೇಮಕಾತಿದಾರರು ಗಲ್ಲಿ ಗ್ಯಾಂಗ್ ರೆಕಾರ್ಡ್ಸ್, ಲಹರಿ ಮ್ಯೂಸಿಕ್, ಸೋನಿ ಮ್ಯೂಸಿಕ್ ಇಂಡಿಯಾ, ಸ್ಪೀಡ್ ರೆಕಾರ್ಡ್ಸ್, ಯೂಬಿಸಾಫ್ಟ್, ಇಎ ಸ್ಪೋರ್ಟ್ಸ್, ಜುಗೊ ಸ್ಟುಡಿಯೋಸ್, ಇತ್ಯಾದಿ

## ಒಂದು ವಾರದಿಂದ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆ ಸ್ಥಗಿತ

ನೈಜ್ಯ ದೆಸೆ ನ್ಯೂಸ್

**ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಪರಿಣಾಮ ಕೊಲ್ಲಿ ರಾಷ್ಟ್ರಗಳ ಮೇಲೂ ಆಗಿರುವ ಕಾರಣ ಜಿಲ್ಲೆಯಲ್ಲಿ ಒಂದು ವಾರದಿಂದ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆ ಸ್ಥಗಿತವಾಗಿದೆ. ಇದರಿಂದಾಗಿ ಜಿಲ್ಲೆಯ ಹೋಟೆಲ್‌ಗಳಲ್ಲಿ ಹಲವು ಆಹಾರ ಪದಾರ್ಥಗಳ ತಯಾರಿಕೆಗೆ ಕೊಕ್ಕೆ ಹಾಕಲಾಗಿದೆ. ಜಿಲ್ಲೆಯ ಹೋಟೆಲ್‌ನವರು ಒಂದು ವಾರ ಅಥವಾ ಹತ್ತು ದಿನಕ್ಕೆ ಆಗುವಷ್ಟು ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಮೊದಲೇ ಖರೀದಿಸುತ್ತಿದ್ದರು.**



ಅದರಲ್ಲಿಯೇ ಒಂದಷ್ಟು ಉಳಿದಿದ್ದು ಅವುಗಳನ್ನು ಮಿತವ್ಯಯವಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಗಂಜ್ ವೃತ್ತದಲ್ಲಿರುವ ಕೃಷ್ಣ ಭವನ ಹೋಟೆಲ್ ಸೇರಿದಂತೆ ಅನೇಕರು ಸಂಕಷ್ಟದ ಸಂದರ್ಭವನ್ನು ಸರಿದೂಗಿಸಲು ಕಟ್ಟಿಗೆ ಒಲೆಯ ಮೊರೆ ಹೋಗಿದ್ದಾರೆ. ವಾಣಿಜ್ಯ ಬಳಕೆ ಸಿಲಿಂಡರ್‌ಗಳು ಯಥೇಚ್ಛವಾಗಿ ಸಿಗುತ್ತಿದ್ದಾಗ ಗ್ಯಾಸ್ ನಿರಂತರವಾಗಿ ಆನ್ ಮಾಡಿ ಇರಿಸಲಾಗುತ್ತಿತ್ತು. ಈಗ ಶೇ. 40ರಷ್ಟು ಮಾತ್ರ ಸಿಲಿಂಡರ್ ಬಳಕೆ ಮಾಡಲಾಗುತ್ತಿದೆ. ಎಲ್ಲ ಹೋಟೆಲ್‌ಗಳಲ್ಲಿ ನಿರಂತರವಾಗಿ ಲಭಿಸುತ್ತಿದ್ದ ದೋಸೆ, ಪೂರಿ, ಮಿರ್ಚಿ, ಭಜಿ, ಭೋಂಡಾ ಸೂಪ್ ಆಹಾರ ಪದಾರ್ಥಗಳ ತಯಾರಿಕೆಗೆ ಕೊಕ್ಕೆ ಹಾಕಲಾಗಿದೆ. ಗ್ರಾಹಕರು ಆರ್ಡರ್ ಕೊಟ್ಟಾಗ ಮಾತ್ರ ಇವುಗಳನ್ನು ತಯಾರಿಸಿಕೊಡಬೇಕಾದ ಕಾರಣ ಇವುಗಳ ತಯಾರಿಕೆ ಕೈ ಬಿಡಲಾಗಿದೆ. ಮೊದಲು ನಿರಂತರವಾಗಿ ಗ್ಯಾಸ್ ಬಳಕೆ ಮಾಡಲಾಗುತ್ತಿತ್ತು. ಈಗ ನಿಯಮಿತವಾಗಿ ಬಳಕೆ ಮಾಡಲಾಗುತ್ತಿದೆ. ಇಡ್ಲಿ ತಯಾರಿಕೆಗೆ ಕಟ್ಟಿಗೆ ಬಾಯ್ಲರ್ ಉಪಯೋಗಿಸಲಾಗುತ್ತಿದೆ. 'ಇಂಥದ್ದೊಂದು ಸಂಕಷ್ಟದ ಪರಿಸ್ಥಿತಿ ಬರುತ್ತದೆ ಎನ್ನುವುದು ಗೊತ್ತಿರಲಿಲ್ಲ. ಮೊದಲು ದಿನವೊಂದಕ್ಕೆ ಒಂದೂವರೆಯಷ್ಟು ಸಿಲಿಂಡರ್ ಖಾಲಿಯಾಗುತ್ತಿತ್ತು. ಈಗ ಎರಡು ದಿನಗಳಿಗೆ ಒಂದು ಸಿಲಿಂಡರ್ ಮಾತ್ರ ಖರ್ಚು ಮಾಡುತ್ತಿದ್ದೇವೆ. ಇನ್ನು ಹತ್ತು ದಿನ ವಾಣಿಜ್ಯ ಬಳಕೆ ಸಿಲಿಂಡರ್ ಸಿಗುವುದು ಕಷ್ಟ. ಕಟ್ಟಿಗೆ ಕೂಡ ಒಂದು ಟನ್‌ಗೆ ?4 ಸಾವಿರದಿಂದ ?4.5 ಸಾವಿರ ಆಗಿದೆ' ಎಂದು ಕೃಷ್ಣಭವನ ಹೋಟೆಲ್ ಮಾಲೀಕರೂ ಆದ ಹೋಟೆಲ್‌ಗಳ ಮಾಲೀಕರ ಸಂಘದ ಜಿಲ್ಲಾಧ್ಯಕ್ಷ ಶಶಿಕರ ಶೆಟ್ಟಿ ತಿಳಿಸಿದರು. ಸಂಕಷ್ಟದ ಪರಿಸ್ಥಿತಿಯನ್ನು ಮೊದಲೇ ಅರಿತಿದ್ದ ಕೆಲವು ಹೋಟೆಲ್‌ಗಳ ಮಾಲೀಕರು ಇನ್ನು ಹತ್ತು ದಿನಗಳಿಗೆ ಆಗುವಷ್ಟು ಸಿಲಿಂಡರ್‌ಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದು, ಅಷ್ಟರೊಳಗೆ ಸಮಸ್ಯೆ ಪರಿಹಾರವಾಗಬಹುದು ಎನ್ನುವ ಭರವಸೆ ಹೊಂದಿದ್ದಾರೆ. ಡಾ. ಸುರೇಶ ಇಟ್ನಾಳ ಜಿಲ್ಲಾಧಿಕಾರಿಹೋಟೆಲ್‌ಗಳಲ್ಲಿ ಗ್ಯಾಸ್ ಹೊರತಾಗಿ ಸೋಲಾರ್ ಬಯೋಗ್ಯಾಸ್ ಬಳಕೆಗೆ ಅವಕಾಶವಿದ್ದು ಈ ಬಗ್ಗೆ ಹೋಟೆಲ್‌ಗಳ ಮಾಲೀಕರಿಗೆ ಅರಿವು ಮೂಡಿಸಬೇಕು. ಖಾಸಗಿ ಕಂಪನಿಗಳು ಗ್ಯಾಸ್ ಬಳಕೆ ತಾತ್ಕಾಲಿಕವಾಗಿ ನಿಲ್ಲಿಸಬೇಕು. 'ಗೃಹಬಳಕೆ ಕೊರತೆಯಿಲ್ಲ; ಆತಂಕಬೇಡ' ಕೊಪ್ಪಳ: ಜಿಲ್ಲೆಯಲ್ಲಿ ಮನೆಬಳಕೆಯ ಅಡುಗೆ ಅನಿಲ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ. ಸಾರ್ವಜನಿಕರು ಆತಂಕಕ್ಕೆ ಒಳಗಾಗಬಾರದು ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ ಮನವಿ ಮಾಡಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ವತಿಯಿಂದ ನಡೆದ ಸಭೆಯಲ್ಲಿ ಮಾತನಾಡಿದ ಅವರು 'ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರು ಆತಂಕದಿಂದ ಅತಿಯಾಗಿ ಗ್ಯಾಸ್ ಬುಕ್ಕಿಂಗ್ ಮಾಡುತ್ತಿರುವುದು ಕಂಡುಬಂದಿದೆ. ಇದರಿಂದಾಗಿ ವ್ಯವಸ್ಥೆಯ ಮೇಲೆ ಒತ್ ತಡ ಉಂಟಾಗುತ್ತದೆ' ಎಂದರು. 'ಗೃಹೋಪಯೋಗಿ ಅನಿಲ ಸಿಲಿಂಡರ್ ವಿತರಣೆ ವೇಳೆ ಬಿಲ್ ಮೊತ್ತಕ್ಕಿಂತ ಹೆಚ್ಚು ಹಣ ತೆಗೆದುಕೊಳ್ಳುವಂತಿಲ್ಲ. ಹಾಗೇನಾದರೂ ತೆಗೆದುಕೊಂಡಲ್ಲಿ ಅಂತಹ ಗ್ಯಾಸ್ ಏಜೆನ್ಸಿಗಳ ವಿರುದ್ಧ ಪ್ರಕರಣ ದಾಖಲಿಸಿ ಪರವಾನಗಿಯನ್ನೂ ರದ್ದು ಪಡಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

## ಬಿದರಕುಂದಿಯಲ್ಲಿ ರಾಜಾಭಕ್ಷಾ ಉರಸು: ಸೌಹಾರ್ದತೆಯ ಸಂದೇಶ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ತಾಲ್ಲೂಕಿನ ಬಿದರಕುಂದಿ ಗ್ರಾಮವು ಧಾರ್ಮಿಕ ಸೌಹಾರ್ದತೆಯ ಸುಂದರ ಪ್ರತೀಕವಾಗಿ ಮತ್ತೊಮ್ಮೆ ಕಂಗೊಳಿಸಿತು. ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ರಾಜಾಭಕ್ಷಾ ಉರ್ಫ್ ಯಮನೂರಪ್ಪ ದರ್ಗಾದ ವಾರ್ಷಿಕ ಗಂದಾ, ಉರಸು ಹಾಗೂ ಜಿಯಾರತ್ ಕಾರ್ಯಕ್ರಮವು ಶನಿವಾರ ಭಕ್ತಿ, ನಂಬಿಕೆ ಮತ್ತು ಸಹೋದರತ್ವದ ವಾತಾವರಣದಲ್ಲಿ ಅದ್ದೂರಿಯಾಗಿ ನೆರವೇರಿತು.**



ಹೋಳಿ ಹುಣ್ಣಿಮೆಯ ನಂತರ ಪ್ರಾರಂಭವಾಗುವ ಗಂದಾ–ಉರಸು ಉತ್ಸವವು ಗ್ರಾಮದಲ್ಲಿ ವಿಶೇಷ ಭಕ್ತಿಭಾವ ಮೂಡಿಸಿತು. ವಿವಿಧ ಧರ್ಮಗಳ ಭಕ್ತರು ಒಂದೇ ವೇದಿಕೆಯಲ್ಲಿ ಸೇರಿ ಪ್ರಾರ್ಥನೆ ಸಲ್ಲಿಸುವ ಮೂಲಕ ಪರಸ್ಪರ ಗೌರವ ಹಾಗೂ ಸಹಬಾಳ್ವೆಯ ಸಂದೇಶ ಸಾರಿದರು. ಉರಸು ಅಂಗವಾಗಿ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ, ಫಾತೇಹಾ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಭಕ್ತರು ದರ್ಗಾಕ್ಕೆ ಭೇಟಿ ನೀಡಿ ಕಾಣಿಕೆ ಅರ್ಪಿಸಿ ತಮ್ಮ ಮನೋಭಿಲಾಷೆಗಳನ್ನು ಬೇಡಿಕೊಂಡರು.

ಇಲ್ಲಿ ಪ್ರಾರ್ಥನೆ ಸಲ್ಲಿಸಿದರೆ ಮನಸ್ಸಿನ ಇಚ್ಛೆಗಳು ನೆರವೇರುತ್ತವೆ ಎಂಬ ನಂಬಿಕೆಯಿಂದ ಪ್ರತಿವರ್ಷವೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಈ ಉತ್ಸವದ ವಿಶೇಷತೆ ಎಂದರೆ ಮುಸ್ಲಿಂ ಸಮುದಾಯದವರಷ್ಟೇ ಅಲ್ಲದೆ ಹಿಂದೂ ಸೇರಿದಂತೆ ವಿವಿಧ ಧರ್ಮಗಳ ಜನರು ಸಮಾನವಾಗಿ ಪಾಲ್ಗೊಳ್ಳುವುದಾಗಿದೆ. ಗ್ರಾಮಸ್ಥರು ಧರ್ಮಭೇದವಿಲ್ಲದೆ ಒಟ್ಟಾಗಿ ಉತ್ಸವ ಆಚರಿಸುವುದು ಗ್ರಾಮೀಣ ಸೌಹಾರ್ದತೆಯ ಸುಂದರ ಉದಾಹರಣೆಯಾಗಿದೆ. ಉರಸು ಸಂದರ್ಭದಲ್ಲಿ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು. ಗ್ರಾಮ ಯುವಕರು ಹಾಗೂ ಹಿರಿಯರು ಸೇರಿ ಉತ್ಸವದ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಿದರು.

ಭಕ್ತರಿಗೆ ಯಾವುದೇ ತೊಂದರೆ ಉಂಟಾಗದಂತೆ ಸ್ವಯಂಸೇವಕರು ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಚನ್ನಬಸಪ್ಪಗೌಡ ಪಾಟೀಲ್, ಈರನಗೌಡ ಪಾಟೀಲ್, ಬೀಮನಗೌಡ ಪಾಟೀಲ್, ಮಹಿಬೂಬ್ ಮುಲ್ಲಾ, ದಾವಲಸಾಬ ವಾಲಿಕಾರ, ಮಹಿಬೂಬ ಡವಳಗಿ, ಸಿದ್ದು ಕಾಜಗಾರ, ಎಲ್.ಎಂ. ಅವಟಿ, ಮಹಿಬೂಬ ವಾಲಿಕಾರ, ಸುಭಾನಲ್ಲಿ ಮುಲ್ಲಾ, ಹಜರೇಸಾ ಹೆಬ್ಬಾಳ, ಬಸವರಾಜ ಹೀರೆಕುರಬರ, ಸಲೀಮ್ ಡವಳಗಿ, ಮುರೆಗೆಪ್ಪ ಹೀರೆಕುರಬರ, ಸಂಗಪ್ಪ ಹಣಮಸಾಗರ, ರಾಜೇಸಾ ಅವಟಿ, ದಸ್ತಗೀರ ಅವಟಿ, ಪರಯ್ಯ ಹೀರೆಮಠ, ಕಾಸೀಮಸಾ ಡವಳಗಿ, ರಫೀಕ್ ಡವಳಗಿ, ಮಕಬುಲ್ ಬನ್ನೆಟ್ಟಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಕ್ಷೇತ್ರೋತ್ಸವ ಕಾರ್ಯಕ್ರಮ ಉದ್ಘಾಟನೆ



ನೈಜ್ಯ ದೆಸೆ ನ್ಯೂಸ್

**ಸೂರ್ಯಕಾಂತಿ ಬೆಳೆ ಅಲ್ಪಾವಧಿಯಲ್ಲಿಯೇ ಅಧಿಕ ಲಾಭ ಕೊಡುತ್ತದೆ' ಎಂದು ರಾಯಚೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾಧಿಕಾರಿ ಡಾ.ಎ.ಆರ್. ಕುರುಬರ ಹೇಳಿದರು.ತಾಲ್ಲೂಕಿನ ಗಬ್ಬೂರಿನಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖೆಯಿಂದ ರೈತ ಶಿವಾಜಿ ಕಲ್ಲೂರು ಅವರ ಹೊಲದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಕ್ಷೇತ್ರೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.**

ಕೃಷಿ ವಿಜ್ಞಾನ ಕೇಂದ್ರ ಕಳೆದ ಹಲವು ವರ್ಷಗಳಿಂದ ಎಣ್ಣೆ ಕಾಳುಗಳ ಬೆಳೆ ಬೆಳೆಯಲು ಮತ್ತು ರೈತರ ಆದಾಯ ಹೆಚ್ಚಿಸಲು ಒಳಾಂಗಣ ತರಬೇತಿ, ಹೊರಾಂಗಣ ತರಬೇತಿ ಮತ್ತು ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಂಡಿದ್ದು, ಸೂರ್ಯಕಾಂತಿ ಬೆಳೆಯಲ್ಲಿ ಸಂಸ್ಕರಣಾ ತಳಿಗಳ ಆಯ್ಕೆ, ಸಮಗ್ರ ಬೇಸಾಯ ಕ್ರಮಗಳು, ಕೀಟ ಹಾಗೂ ರೋಗಗಳ ನಿರ್ವಹಣೆಯ ಬಗ್ಗೆ ವಿಜ್ಞಾನಿಗಳಿಂದ ನಿರಂತರ ಮಾಹಿತಿ ನೀಡುತ್ತಿದ್ದು, ರೈತಾಪಿ ವರ್ಗಕ್ಕೆ ಅನುಕೂಲವಾಗಿದೆ' ಎಂದು ಹೇಳಿದರು.

ಬೀಜ ಘಟಕದ ವಿಶೇಷಾಧಿಕಾರಿ ಅರುಣ ಕುಮಾರ ಹೊಸಮನಿ ಮಾತನಾಡಿ,'ರೈತರು ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರದೇಶಗಳಲ್ಲಿ ಬೆಳೆ ಬೆಳೆಯಬೇಕು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಬಿಡುಗಡೆಯಾದ ಸೂರ್ಯಕಾಂತಿಯ ವಿವಿಧ ಸಂಸ್ಕರಣಾ ತಳಿಗಳ ಬಗ್ಗೆ ಮಾಹಿತಿ ನೀಡಿ ರೈತರು ಪ್ರಮಾಣೀಕೃತ ಬೀಜಗಳನ್ನೇ ಉಪಯೋಗಿಸಬೇಕು' ಎಂದು ಸಲಹೆ ನೀಡಿದರು. ಅಖಿಲ ಭಾರತ ಸಮನ್ವಿತ ಸೂರ್ಯಕಾಂತಿ ಸಂಶೋಧನಾ ಯೋಜನೆ ಮುಖ್ಯಸ್ಥ ವಿಕಾಸ್.ವಿ ಕುಲಕರ್ಣಿ ಮಾತನಾಡಿ,'ಸೂರ್ಯಕಾಂತಿ ಬಹು ಮುಖ್ಯ ಎಣ್ಣೆಕಾಳಿನ ಬೆಳೆಯಾಗಿದ್ದು, ಇದನ್ನು ಮುಂಗಾರು, ಹಿಂಗಾರು ಮತ್ತು ಬೇಸಿಗೆಯಲ್ಲೂ ಕೂಡ ಬೆಳೆಯಬಹುದಾಗಿದೆ. ಆರ್.ಎಸ್.ಎಫ್.ಎಚ್ 700 ಸಂಸ್ಕರಣಾ ತಳಿಯನ್ನು ಎಕರೆಗೆ 2 ಕಿ.ಗ್ರಾಂ ಬೀಜವನ್ನು ಸಾಲಿನಿಂದ ಸಾಲಿಗೆ 60 ಸೆ.ಮೀ ಮತ್ತು ಗಿಡದಿಂದ ಗಿಡಕ್ಕೆ 30 ಸೆ.ಮೀ ಅಂತರದಲ್ಲಿ ಬಿತ್ತಬೇಕು' ಎಂದು ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ತಿಮ್ಮಣ್ಣ ನಾಯಕ ಮಾತನಾಡಿ,' ಆರ್.ಎಸ್.ಎಫ್.ಎಚ್ 700 ಸಂಸ್ಕರಣಾ ತಳಿಯು ಬೂದು ರೋಗಕ್ಕೆ ನಿರೋಧಕತೆ ಹೊಂದಿದ್ದು, ಎಕರೆಗೆ 7–8 ಕ್ವಿಂಟಲ್ ಇಳುವರಿ ಪಡೆಯಬಹುದಾಗಿದೆ' ಎಂದರು. ಶೀವಾಣಿ, ಜಿ.ಎನ್, ಮಲ್ಲರೆಡ್ಡಿ, ಸಹಾಯಕ ನಿರ್ದೇಶಕ ಶ್ರೀನಿವಾಸ ನಾಯಕ, ಕೃಷಿ ಅಧಿಕಾರಿಗಳಾದ ರೇಖಾ, ಅಮರೇಶ ಆಸಿಹಾಳ ಭಾಗವಹಿಸಿದ್ದರು.

## ರಾಷ್ಟ್ರೀಯ ಲೋಕ ಅದಾಲತ್ :ಜೀವನಾಂಶ ಬೇಕೆಂದು ಕೇಳಿದ ದಂಪತಿಗಳನ್ನು ಒಗ್ಗೂಡಿಸಿದ :ನ್ಯಾಯದೀಶೆ ಹುಂಡಿ ಮಂಜುಳಾ ಶಿವಪ್ಪ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಮಾ 15 .ಇಂದು ನಡೆದ ರಾಷ್ಟ್ರೀಯ ಲೋಕ ಅಧಾಲತ್ ನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಒಟ್ಟು ಬಾಕಿ ಇದ್ದ 2399 ಪ್ರಕರಣಗಳಲ್ಲಿ 712 ಪ್ರಕರಣಗಳು ರಾಜಿಯಾಗುವ ಮೂಲಕ ಇತ್ಯಾರ್ಥವಾಗಿವೆ ಇದರ ಒಟ್ಟು ಮೊತ್ತ 2,73,44,300/– ( ಎರಡು ಕೋಟಿ ಎಪ್ಪತ್ತಮೂರು ಲಕ್ಷ ನಲ್ವತ್ತ ನಾಲ್ಕು ಸಾವಿರದ ಮುನ್ನೂರು) ರೂ ಆಗಿದ್ದು, ಅದರಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದ ದಂಪತಿಗಳಿಗೆ ಹಿರಿಯ ಶ್ರೇಣಿ ನ್ಯಾಯಧೀಶರಾದ ಶ್ರೀಮತಿ ಹುಂಡಿ ಮಂಜುಳಾ ಶಿವಪ್ಪ ಇವರು ಮನಹೊಲಿಸಿ ಗಂಡ ಹೆಂಡತಿಯನ್ನು ಒಗ್ಗೂಡಿಸಿದರು.**





ಅಂಬಣ್ಣ ಕೆ. ಪ್ರಧಾನ ಸಿವಿಲ್ ನ್ಯಾಯಧೀಶರು ಇವರು ಪ್ರಧಾನ ಸಿವಿಲ್ ನ್ಯಾಯಾಲದಲ್ಲಿ ಒಟ್ಟು ಬಾಕಿ ಇದ್ದ 2306 ಪ್ರಕರಣಗಳಲ್ಲಿ 874 ಪ್ರಕರಣಗಳು ರಾಜಿಯಾಗುವ ಮೂಲಕ ಇತ್ಯಾರ್ಥವಾಗಿವೆ ಇದರ ಒಟ್ಟು ಮೊತ್ತ 95,82,551/– (ತೊಂಬತ್ತ ಐದು ಲಕ್ಷದ ಎಂಬತ್ತ ಎರಡು ಸಾವಿರದ ಐದುನೂರ ಐವತೊಂದು) ರೂ ಆಗಿದ್ದು ಮತ್ತು ಹೆಚ್ಚುವರಿ ಸಿವಿಲ್ ನ್ಯಾಯಾಲದಲ್ಲಿ ಒಟ್ಟು ಬಾಕಿ ಇದ್ದ 1077 ಪ್ರಕರಣಗಳಲ್ಲಿ 682 ಪ್ರಕರಣಗಳು ರಾಜಿಯಾಗುವ ಮೂಲಕ ಇತ್ಯಾರ್ಥವಾಗಿವೆ ಇದರ ಒಟ್ಟು ಮೊತ್ತ 3,22,183/– (ಮೂರು ಲಕ್ಷದ ಇಪ್ಪತ್ತೆರಡು ಸಾವಿರದ ನೂರಾ ಎಂಬತ್ತಾ ಮೂರು) ರೂ ಆಗಿದ್ದು. ಇಂದು ಒಟ್ಟು ಲಿಂಗಸಗೂರು ನ್ಯಾಯಾಲಯದಲ್ಲಿ 2268 ಪ್ರಕರಣಗಳು ರಾಜಿಯಾಗಿವೆ.

ಇದರ ಒಟ್ಟು ಮೊತ್ತ 3,72,49,034/– (ಮೂರು ಕೋಟಿ ಎಪ್ಪತ್ತ ಎರಡು ಲಕ್ಷದ ನಲವತ್ತ ಒಂಬತ್ತು ಸಾವಿರದ ಮೂವತ್ತ ನಾಲ್ಕು) ರೂ ಆಗಿದ್ದು. ಮತ್ತು ಒಟ್ಟು ಬಾಕಿ ವ್ಯಾಜ್ಯಪೂರ್ವ ಪ್ರಕರಣಗಳು 6000 ರಲ್ಲಿ 4950 ಪ್ರಕರಣಗಳು ರಾಜಿಯಾಗುವ ಮೂಲಕ ಇತ್ಯಾರ್ಥವಾಗಿವೆ ಇದರ ಒಟ್ಟು ಮೊತ್ತ 29,65,159/– ( ಇಪ್ಪತ್ತ ಒಂಬತ್ತು ಲಕ್ಷದ ಅರವತ್ತ ಐದು ಸಾವಿರದ ಒಂದು ನೂರಾ ಐವತ್ತಾ ಒಂಬತ್ತು ) ರೂ ಆಗಿದೆ. ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಭೂಪನಗೌಡ ಪಾಟೀಲ್, ಬಾಲರಾಜ, ಮಹಾಲಿಂಗಪ್ಪ , ಹಾಜಿಬಾಬ , ನಾಗರಾಜ ಗಸ್ತಿ , ಕಿರಣ ಮಸ್ಕಿ , ಶ್ರೀಮತಿ ಮಂಜುಳಾ, ವೀಣಾ ಶ್ರೀ ದೇಸಾಯಿ, ಅಮರೇಶ ಪಾಟೀಲ್, ಶಿವಕುಮಾರ, ಈಶ್ವರ ಜಾದವ, ನಾಗರತ್ನ, ಶರಣಬಸವ, ರಾಜಶೇಖರ್ ವಕೀಲರು ಸೇರಿದಂತೆ ಇತರ ವಕೀಲರು ಹಾಜರಿದ್ದರು

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ




ನೈಜ್ಯ ದೆಸೆ ನ್ಯೂಸ್

**"ಮಹಿಳೆ ಕೇವಲ ಒಂದು ಕುಟುಂಬದ ಶಕ್ತಿಯಲ್ಲ, ಅವಳು ಇಡೀ ರಾಷ್ಟ್ರದ ಚೈತನ್ಯ. ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಗೌರವ ನೀಡಿದಾಗ ಮಾತ್ರ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯ" ಎಂದು ಮಮತಾ ರಾಯರೆಡ್ಡಿ ಹೇಳಿದರು.ಪಟ್ಟಣದ ಹೊರವಲಯದ ಬಿ.ವಿ. ಶೆಟ್ಟರ್ ಕಲ್ಯಾಣ ಮಂಟಪದಲ್ಲಿ ಶನಿವಾರ ಆಯೋಜಿಸಲಾದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಹಾಗೂ ಯಲಬುರ್ಗಾ ವಿಧಾನಸಭಾ ಮಹಿಳಾ ಕಾಂಗ್ರೆಸ್ ಮತ್ತು ಆರಾಮ್ ಎನ್‌ಜಿಓ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**

ಮಹಿಳೆಯರಿಗೆ ಕೇವಲ ಒಂದು ದಿನದ ಗೌರವ ನೀಡುವುದಲ್ಲದೇ ಪ್ರತಿದಿನವೂ ಅವರ ತ್ಯಾಗ ಮತ್ತು ಕೊಡುಗೆಗಳನ್ನು ಸ್ಮರಿಸಬೇಕು. ಮಹಿಳೆ ತಾಳ್ಮೆಯ ಸಂಕೇತವಾಗಿದ್ದು, ಜೀವನದಲ್ಲಿ ಎದುರಾಗುವ ಸವಾಲುಗಳ ನಡುವೆಯೂ ನಗುಮುಖದಿಂದ ಜವಾಬ್ದಾರಿಗಳನ್ನು ನಿಭಾಯಿಸುವ ಶಕ್ತಿಯೇ ಅವಳ ದೊಡ್ಡ ಬಲವಾಗಿದೆ. ತಾಳ್ಮೆ ಸೋಲು ಅಲ್ಲ, ಅದು ಪರಿಸ್ಥಿತಿಯನ್ನು ಗೆಲ್ಲುವ ದಾರಿ ಎಂದು ಹೇಳಿದರು. ಈ ಸಂದರ್ಭದಲ್ಲಿ 2026ನೇ ಸಾಲಿನ ಕೊಪ್ಪಳ ಜಿಲ್ಲಾ ಸ್ತ್ರೀ ರತ್ನ ಪ್ರಶಸ್ತಿ ಅಡಿಯಲ್ಲಿ ವಿದ್ಯೆ, ಕೃಷಿ, ಸಮಾಜಸೇವೆ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 14 ಮಹಿಳೆಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿ ಶರಣಮ್ಮ ಚಟ್ಟಿ ಮಾತನಾಡಿ, ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿರುವುದು ಸಂತಸದ ವಿಷಯ. ಆದರೆ ಗ್ರಾಮೀಣ ಭಾಗದ ಮಹಿಳೆಯರಲ್ಲಿ ಇನ್ನೂ ಶಿಕ್ಷಣ ಮತ್ತು ಆರೋಗ್ಯ ಕುರಿತು ಅರಿವು ಮೂಡಿಸುವ ಅಗತ್ಯವಿದೆ ಎಂದು ಹೇಳಿದರು. ಇದೇ ವೇಳೆ 'ಮಹಿಳಾ ಸಬಲೀಕರಣ ಮತ್ತು ಇಂದಿನ ಸವಾಲುಗಳು' ವಿಷಯದ ಕುರಿತು ವಿಶೇಷ ಉಪನ್ಯಾಸದಲ್ಲಿ ಮಹಿಳೆಯರ ಕಾನೂನು ಹಕ್ಕುಗಳು ಹಾಗೂ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭರತನಾಟ್ಯ, ಸರಸ್ವತಿ ಸಾಂಸ್ಕೃತಿಕ ಮಹಿಳಾ ಸಂಘ ಕುಷ್ಟಗಿ, ಮಹಿಳಾ ಡೊಳ್ಳು ಕುಣಿತ, ಮಲ್ಲಗಂಬ, ಸಮರಕಲೆ ಕಿನ್ನಾಳ ಕಲೆಯ ವಸ್ತು ಪ್ರದರ್ಶನ, ಜಾನಪದ ಗೀತೆ ಮತ್ತು ನೃತ್ಯ ಪ್ರದರ್ಶನಗಳು ಪ್ರೇಕ್ಷಕರನ್ನು ಮನಸೂರೆಗೊಳಿಸಿದವು. ವಿಶೇಷವಾಗಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಶತಾಯುಷಿ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತರ ರಾಮಾಯಣದ ಸನ್ನಿವೇಶ ಮತ್ತು ಅಪರೂಪದ ಜನಪದ ಕಲೆ ತೊಗಲುಗೊಂಬೆಯಾಟ ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತ ಶರಣಮ್ಮ ಚನ್ನಪ್ಪ ಚಟ್ಟಿ, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಜ್ಯೋತಿ ಎಂ. ಗೊಂಡಬಾಳ, ಶ್ರೀಮತಿ ಗಿರಿಜಾ ಸಂಗಟಿ, ಫರೀದಾ ಬೇಗಂ ತಂಬಾಕದಾರ, ಸಾವಿತ್ರಿ ಎಸ್. ಗೊಲ್ಲರ್, ಜಯಶ್ರೀ ಕಂದುಕುರ್, ನಂದಿತಾ ದಾನರೆಡ್ಡಿ, ಶರಣಮ್ಮ ಪೂಜಾರಿ, ಪಟ್ಟಣ ಪಂಚಾಯತ್ ಅಧ್ಯಕ್ಷೆ ಲೀಲಾವತಿ ಪ್ರವೀಣ್ ಮುಧೋಳ್, ಉಪಾಧ್ಯಕ್ಷೆ ಮಂಜುಳಾ ಕಲ್ಮನಿ ಮತ್ತು ಜಿಲ್ಲೆಯ ಅನೇಕ ಮಹಿಳೆಯರು ಉಪಸ್ಥಿತರಿದ್ದರು.